ನಿಮ್ಮ ನಂಬಿಕೆಯ ಧ್ವನಿ

# ಧೈರ್ಯದ ದಾರಿ

DAIRYADA DAARI NEWS PAPER

EMAIL : dairyadadaari@gmail.com ಸಂಪುಟ: 01 ಸಂಚಿಕೆ: 104

ಬೆಲೆ ರೂ : 2.00

ರಾಯಚೂರು

ಪುಟ: 4

ಸಂಪಾದಕರು : ಸೈಯದ್ ಅಹ್ಮದ್ ಹುಸೇನಿ ಮತವಾಲೆ

Cell : 6360866626, 9036887793

KANNADA DAILY NEWS PAPER

ಕನ್ನಡ ದಿನಪತ್ರಿಕೆ

DAIRYADA DAARI


RNI NO: KNKAN/25/A2795 ಮಂಗಳವಾರ: 31-03-2026

# ಏಪ್ರಿಲ್ 1ರಿಂದ ವಿದ್ಯುತ್, ನೀರಿನ ದರ ಏರಿಕೆ ಶಾಕ್

**ಬೆಂಗಳೂರು, ಮಾ. 30–** ಹೊಸ ಆರ್ಥಿಕ ವರ್ಷದ ಮೊದಲ ದಿನವೇ ರಾಜ್ಯದ ಜನತೆಗೆ ವಿದ್ಯುತ್ ಹಾಗೂ ನೀರಿನ ದರ ಏರಿಕೆಯ ಬಿಸಿ ತಟ್ಟುವ ಸಾಧ್ಯತೆ ಇದೆ.
ಕರ್ನಾಟಕ ವಿದ್ಯುತ್ ನಿಯಂತ್ರಣ ಆಯೋಗ (KERC) ಏಪ್ರಿಲ್ 1ರಿಂದ ಹೊಸ ದರ ಜಾರಿಗೆ ತರುವ ಬಗ್ಗೆ ಅಂತಿಮ ಹಂತದ ಚರ್ಚೆಯಲ್ಲಿ ತೊಡಗಿದೆ.

ಯೂನಿಟ್‌ಗೆ 40, 50 ಪೈಸೆ ಹೆಚ್ಚಳ ಸಾಧ್ಯತೆ ಇದ್ದು. ಬೆಸ್ಕಾಂ (BESCOM) ಸೇರಿದಂತೆ ಐದು ಎಸ್ಕಾಂಗಳ ಪ್ರಸ್ತಾವನೆಯಂತೆ ಪ್ರತಿ ಯೂನಿಟ್ ವಿದ್ಯುತ್‌ಗೆ ಸುಮಾರು 40 ರಿಂದ 50 ಪೈಸೆವರೆಗೆ ಹೆಚ್ಚಳ ಮಾಡುವ ಸಾಧ್ಯತೆ ಇದೆ. ನಷ್ಟದಲ್ಲಿರುವ ವಿದ್ಯುತ್ ವಿತರಣಾ ಕಂಪನಿಗಳು ಆದಾಯದ ಕೊರತೆ ಸರಿಪಡಿಸಲು ಈ ಕ್ರಮ ಅನಿವಾರ್ಯ ಎಂದು ಅಧಿಕಾರಿಗಳು ವಾದಿಸಿದ್ದಾರೆ.

**ಯಾರಿಗೆ ಪರಿಣಾಮ?**
ಗೃಹ ಬಳಕೆದಾರರು, ವಾಣಿಜ್ಯ ಬಳಕೆದಾರರು, ಕೈಗಾರಿಕಾ ಕ್ಷೇತ್ರ ಈ ಮೂರು ವರ್ಗಗಳಿಗೂ ದರ ಏರಿಕೆಯ ನೇರ ಪರಿಣಾಮ ಬೀಳಲಿದೆ.





**ಗೃಹ ಜ್ಯೋತಿ ಫಲಾನುಭವಿಗಳಿಗೆ ವಿನಾಯಿತಿ–** 'ಗೃಹ ಜ್ಯೋತಿ' ಯೋಜನೆಯಡಿ 200 ಯೂನಿಟ್ ಒಳಗೆ ವಿದ್ಯುತ್ ಬಳಸುವ ಗ್ರಾಹಕರ ಬಿಲ್ ಅನ್ನು ಸರ್ಕಾರವೇ ಭರಿಸುವುದರಿಂದ ಅವರಿಗೆ ನೇರ ಹೊರೆ ಇರುವುದಿಲ್ಲ. ಆದರೆ 200 ಯೂನಿಟ್ ಮೀರಿದ ಬಳಕೆದಾರರು ಹೆಚ್ಚಿದ ದರವನ್ನು ಪಾವತಿಸಬೇಕಾಗುತ್ತದೆ.

**ಸ್ಥಿರ ಶುಲ್ಕವೂ ಏರಿಕೆ ಸಾಧ್ಯತೆ–** ಯೂನಿಟ್ ದರ ಮಾತ್ರವಲ್ಲದೆ, ಸ್ಥಿರ ಶುಲ್ಕವನ್ನೂ ಹೆಚ್ಚಿಸುವ ಬಗ್ಗೆ ಚಿಂತನೆ ನಡೆದಿದೆ. ವಾಣಿಜ್ಯ ವಿದ್ಯುತ್ ದರ ಏರಿಕೆಯಾದರೆ ಹೋಟೆಲ್, ಸಣ್ಣ ಕೈಗಾರಿಕೆಗಳ ಉತ್ಪಾದನಾ ವೆಚ್ಚ ಹೆಚ್ಚಾಗಿ, ಅದರ ಪರಿಣಾಮವಾಗಿ ವಸ್ತುಗಳ ಬೆಲೆ ಏರಿಕೆ ಸಾಧ್ಯತೆ ಇದೆ..

**ನೀರಿನ ದರವೂ ಏರಿಕೆ ?–** ಬೆಂಗಳೂರಿಗರಿಗೆ ಮತ್ತೊಂದು ಶಾಕ್ ಏಪ್ರಿಲ್ 1ರಿಂದ ಬೆಂಗಳೂರಿನಲ್ಲಿ ನೀರಿನ ಬಿಲ್ಲಿನಲ್ಲೂ ಶೇ. 3ರಷ್ಟು ಹೆಚ್ಚಳ ಜಾರಿಗೆ ಬರಲಿದೆ.
ನೀರಿನ ಸರಬರಾಜು ವೆಚ್ಚ ಹೆಚ್ಚಳ, ನಿರ್ವಹಣಾ ವೆಚ್ಚ ಏರಿಕೆ, ವಿದ್ಯುತ್ ಮತ್ತು ಮೂಲಸೌಕರ್ಯ ಖರ್ಚು ಹೆಚ್ಚಳ, ಜಲಮಂಡಳಿಯ ಆರ್ಥಿಕ ಒತ್ತಡ ಕಡಿಮೆ ಮಾಡಲು ಈ ನಿರ್ಧಾರ ಕೈಗೊಳ್ಳಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.
ಕಳೆದ ವರ್ಷವೇ ಪ್ರತಿವರ್ಷ ನೀರಿನ ದರವನ್ನು ಶೇ. 3ರಷ್ಟು ಹೆಚ್ಚಿಸಲು ಅನುಮೋದನೆ ನೀಡಲಾಗಿದ್ದು, ಅದರ ಭಾಗವಾಗಿ ಈ ವರ್ಷದ ಏರಿಕೆ ಜಾರಿಯಾಗುತ್ತಿದೆ ಎಂದು ಜಲಮಂಡಳಿ ಅಧ್ಯಕ್ಷ ರಾಮ್ ಪ್ರಸಾತ್ ಮನೋಹರ್ ತಿಳಿಸಿದರು.
ಏಪ್ರಿಲ್ 1ರಿಂದ ವಿದ್ಯುತ್ ಹಾಗೂ ನೀರಿನ ದರ ಏರಿಕೆಯಿಂದ ಬೆಂಗಳೂರಿನ ಜನತೆಗೆ ದ್ವಿಗುಣ ಆರ್ಥಿಕ ಹೊರೆ ಬೀಳುವ ಸಾಧ್ಯತೆ ಇದೆ. ಸರ್ಕಾರದ ಗ್ಯಾರಂಟಿ ಯೋಜನೆಗಳ ನಡುವೆಯೇ ಈ ದರ ಏರಿಕೆ ಜನರಲ್ಲಿ ಮಿಶ್ರ ಪ್ರತಿಕ್ರಿಯೆ ಮೂಡಿಸಿದೆ.

## ದಕ್ಷಿಣ ಕಾಶಿ ನಂಜನಗೂಡಿನಲ್ಲಿ ಪಂಚ ರಥೋತ್ಸವಕ್ಕೆ ಭಕ್ತ ಸಾಗರ



**ನಂಜನಗೂಡು: ಮಾ.30:–** ದಕ್ಷಿಣ ಕಾಶಿ ಎಂಬ ಖ್ಯಾತಿ ಪಡೆದ ನಂಜನಗೂಡಿನಲ್ಲಿ ಇಂದು ಬೆಳಗ್ಗೆ ಶ್ರೀ ಕಂಠೇಶ್ವರಸ್ವಾಮಿಯ ಪಂಚ ಮಹಾ ರಥೋತ್ಸವ ಧಾರ್ಮಿಕ ಸಂಪ್ರದಾಯದೊಂದಿಗೆ ವಿಜೃಂಭಣೆಯಾಗಿ ನೆರವೇರಿತು.

ಇಂದು ಬೆಳಿಗ್ಗೆ 5:30 ರಿಂದ 6:30 ಗಂಟೆ ಒಳಗೆ ಸಲ್ಲುವ ಶುಭ ಮೀನ ಲಗ್ನದಲ್ಲಿ ಶ್ರೀಕಂಟೇಶ್ವರ ಸ್ವಾಮಿ ಪಂಚ ಮಹಾ ರಥೋತ್ಸವಕ್ಕೆ ಲಕ್ಷಾಂತರ ಭಕ್ತರ ಸಮ್ಮುಖದಲ್ಲಿ ಅದ್ದೂರಿಯಾಗಿ ಶಾಸಕ ದರ್ಶನ್ ಧ್ರುವನಾರಾಯಣ ಚಾಲನೆ ನೀಡಿದರು. ನಂಜನಗೂಡು ಕ್ಷೇತ್ರ 5 ರಥಗಳನ್ನು ಎಳೆಯುವ ಏಕೈಕ ಕ್ಷೇತ್ರವೆಂದು ಈ ಕ್ಷೇತ್ರವು ಪ್ರಸಿದ್ಧವಾಗಿದೆ.ವಿವಿಧತೆಯಿಂದ ಆಗಮಿಸಿದ ಲಕ್ಷಾಂತರ ಭಕ್ತರು ರಥವನ್ನು ಭಕ್ತಿ ಭಾವದಿಂದ ಜೈ ಜೈ ನಂಜುಂಡ ಎಂದು ಜೈಕಾರ ಹಾಕುತ್ತ ಎಳೆದರು ಪಟ್ಟಣ ಮತ್ತು ರಥದ ಬೀದಿಯಲ್ಲಿ ಎಲ್ಲೆಡೆ ಸಂಭ್ರಮ ಸಡಗರ ಕಂಡುಬಂದಿತ್ತು. 2ನೇಪುಟಕ್ಕೆ

## ಯಡಿವಾಳದಲ್ಲಿ ಮೆಣಸಿನಕಾಯಿ ರಾಶಿಗೆ ಬೆಂಕಿ : ರೈತನಿಗೆ ಲಕ್ಷಾಂತರ ನಷ್ಟ ಪೆಟ್ರೋಲ್ ಸುರಿದು ಬೆಂಕಿ ಹಚ್ಚಿದ ಶಂಕೆ ಕಿಡಿಗೇಡಿಗಳ ಕೃತ್ಯ



ಧೈರ್ಯದ ದಾರಿ

ಮಾನ್ವಿ: ಯಡಿವಾಳ ಗ್ರಾಮದಲ್ಲಿ ರೈತ ಸಣ್ಣ ಮೌಲ ತಂದೆ ಭೀಮಯ್ಯ ಅವರ ಮೆಣಸಿನಕಾಯಿ ರಾಶಿಗಳಿಗೆ ಬೆಂಕಿ ಹಚ್ಚಿದ ಪ್ರಕರಣಕ್ಕೆ ಸಂಬಂಧಿಸಿದಂತೆ ಹೊಸ ಮಾಹಿತಿ ಬೆಳಕಿಗೆ ಬಂದಿದೆ. ಸ್ಥಳದಲ್ಲಿ ಪೆಟ್ರೋಲ್ ಕ್ಯಾನ್ ಪತ್ತೆಯಾಗಿದ್ದು, ಪೆಟ್ರೋಲ್ ಸುರಿದು ಉದ್ದೇಶಪೂರ್ವಕವಾಗಿ ಬೆಂಕಿ ಹಚ್ಚಿರುವ ಶಂಕೆ ವ್ಯಕ್ತವಾಗಿದೆ. ಸುಮಾರು 10 ಲಕ್ಷ ರೂಪಾಯಿ ಮೌಲ್ಯದ ಮೆಣಸಿನಕಾಯಿ ಸಂಪೂರ್ಣವಾಗಿ ಸುಟ್ಟು ನಾಶವಾಗಿದ್ದು, ರೈತನಿಗೆ ಭಾರೀ ಆರ್ಥಿಕ ನಷ್ಟ ಉಂಟಾಗಿದೆ. ಹೊಲದಲ್ಲಿದ್ದ ಸಾಕ್ಷ್ಯಗಳು ಕಿಡಿಗೇಡಿಗಳ ಸಂಚು ಎನ್ನುವ ಅನುಮಾನವನ್ನು ಮತ್ತಷ್ಟು ಬಲಪಡಿಸುತ್ತಿವೆ. ಗ್ರಾಮಸ್ಥರು ಘಟನೆಗೆ ತೀವ್ರ ಖಂಡನೆ ವ್ಯಕ್ತಪಡಿಸಿದ್ದು, ತಪ್ಪಿತಸ್ಥರನ್ನು ಶೀಘ್ರವಾಗಿ ಬಂಧಿಸಿ ಕಠಿಣ ಕ್ರಮ ಕೈಗೊಳ್ಳುವಂತೆ ಆಗ್ರಹಿಸಿದ್ದಾರೆ. ಪೊಲೀಸ್ ಇಲಾಖೆ ಈ ಪ್ರಕರಣವನ್ನು ಗಂಭೀರವಾಗಿ ಪರಿಗಣಿಸಿ ತನಿಖೆ ನಡೆಸುವುದು ಅಗತ್ಯವಾಗಿದೆ.
ರೈತನಿಗೆ ತಕ್ಷಣ ಪರಿಹಾರ ನೀಡಬೇಕು ಹಾಗೂ ಇಂತಹ ಘಟನೆಗಳು ಮರುಕಳಿಸದಂತೆ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಬೇಕು ಎಂಬ ಬೇಡಿಕೆಯೂ ಕೇಳಿಬರುತ್ತಿದೆ.

## ತಾಲೂಕು ಕನ್ನಡ ಸಾಹಿತ್ಯ ಪರಿಷತ್ತು ವತಿಯಿಂದ ದತ್ತಿ ಉಪನ್ಯಾಸ

ಧೈರ್ಯದ ದಾರಿ




**ಮಾನ್ವಿ.:** ಪಟ್ಟಣದ ಕಳಿಂಗ ಪಿ.ಯು. ಕಾಲೇಜಿನಲ್ಲಿ ಶನಿವಾರ ತಾಲೂಕು ಕನ್ನಡ ಸಾಹಿತ್ಯ ಪರಿಷತ್ತು ಮಾನ್ವಿ ವತಿಯಿಂದ ನಡೆದ ವಿವಿಧ ದತ್ತಿ ದಾನಿಗಳ ಉಪನ್ಯಾಸ ಕಾರ್ಯಕ್ರಮದಲ್ಲಿ ದಿ.ಶ್ರೀ ರಾಮಚಂದ್ರಪ್ಪ ದತ್ತಿ ವಿಷಯ ರಾಮಚಂದ್ರಪ್ಪನವರ ಕುರಿತು ನಿವೃತ್ತ ಶಿಕ್ಷಕ ಮೂಕಪ್ಪ ಕಟ್ಟಿಮನಿ ಉಪನ್ಯಾಸ ನೀಡಿ ರಾಮಚಂದ್ರಪ್ಪನವರು ಮಾನ್ವಿ ಪಟ್ಟಣದಲ್ಲಿ ಅನೇಕ ಸಾಮಾಜಿಕ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ಭಾಗವಹಿಸುವುದರ ಜೊತೆಗೆ ಸಮೂಹವನ್ನು ತಮ್ಮೊಂದಿಗೆ ಮುನ್ನಡೆಸುವ ಮೂಲಕ ಇಂದಿಗೂ ಕೂಡ ಸ್ಮರಣೀಯರಾಗಿದ್ದಾರೆ ವೃಕ್ಷಮಾತೆ ಸಾಲುಮರದ ತಿಮ್ಮಕ್ಕನವರನ್ನು ಪಟ್ಟಣಕ್ಕೆ ಕರೆಸಿ ಜನರಲ್ಲಿ ಪರಿಸರ ಜಾಗೃತಿಯನ್ನು ಮೂಡಿಸುವುದರ ಜೊತೆಯಲ್ಲಿ ಪಟ್ಟಣದಲ್ಲಿ ಸಾವಿರಾರು ಸಸಿಗಳನ್ನು ನೆಟ್ಟು ಪೋಷಿಸಿದ್ದಾರೆ. ಕನ್ನಡ ಸಾಹಿತ್ಯ ಪರಿಷತ್ ತಾಲೂಕು ಘಟಕದ ಅಧ್ಯಕ್ಷರಾಗಿ ಕನ್ನಡ ಪರ ಅನೇಕ ಕಾರ್ಯಕ್ರಮಗಳನ್ನು ಅಯೋಜಿಸುವ ಮೂಲಕ ಕನ್ನಡ ಸಾಹಿತ್ಯ ಪರಿಷತ್ ಅನ್ನು ಮನೆ,ಮನೆಗೆ ಕೊಂಡೊಯ್ದಿದ್ದಾರೆ ಎಂದು ತಿಳಿಸಿದರು. 2ನೇಪುಟಕ್ಕೆ

## ಇಂಧನ ಅಭಾವವಿಲ್ಲ: ವದಂತಿಗಳಿಗೆ ಕಿವಿಗೊಡಬೇಡಿ

### ಸಿರವಾರ ತಹಸೀಲ್ದಾರ್ ಅಶೋಕ ಪವಾರ್ ಭರವಸೆ; ಪೆಟ್ರೋಲ್ ಬಂಕ್ ಮಾಲೀಕರ ಸಭೆ

ಧೈರ್ಯದ ದಾರಿ

**ಸಿರವಾರ:** ತಾಲೂಕಿನಾದ್ಯಂತ ಪೆಟ್ರೋಲ್ ಮತ್ತು ಡೀಸೆಲ್ ಕೊರತೆಯಿದೆ ಎಂಬ ಸುಳ್ಳು ವದಂತಿಗಳಿಂದ ಸಾರ್ವಜನಿಕರು ಆತಂಕಕ್ಕೊಳಗಾಗಿದ್ದು, ಪೆಟ್ರೋಲ್ ಬಂಕ್‌ಗಳ ಮುಂದೆ ವಾಹನ ಸವಾರರು ದೀರ್ಘ ಸಾಲಿನಲ್ಲಿ ನಿಲ್ಲುತ್ತಿರುವ ದೃಶ್ಯಗಳು ಸಾಮಾನ್ಯವಾಗಿದೆ. ಈ ಹಿನ್ನೆಲೆಯಲ್ಲಿ ವದಂತಿಗಳಿಗೆ ತೆರೆ ಎಳೆಯಲು ತಹಸೀಲ್ದಾರ್ ಅಶೋಕ ಪವಾರ್ ಅವರು ಪೆಟ್ರೋಲ್ ಬಂಕ್ ಮತ್ತು ಗ್ಯಾಸ್ ಏಜೆನ್ಸಿ ಮಾಲೀಕರ ತುರ್ತು ಸಭೆ ನಡೆಸಿದರು. 2ನೇಪುಟಕ್ಕೆ►



## ಮಾನ್ವಿಯಲ್ಲಿ ಎಸ್‌ವಿಎಸ್ ಶಾಲೆ ದಶಮಾನೋತ್ಸವ: ಶಾಸಕ ಜಿ. ಹಂಪಯ್ಯ ನಾಯಕ್ ಉದ್ಘಾಟನೆ




ಧೈರ್ಯದ ದಾರಿ

**ಮಾನ್ವಿ:** ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಮಾನ್ವಿ ನಗರದಲ್ಲಿ ಈ ದಿನ ಎಸ್ ವಿ ಎಸ್ ಶಾಲೆಯ ದಶಮಾನೋತ್ಸವದ ಕಾರ್ಯಕ್ರಮವನ್ನು ಉದ್ಘಾಟನೆ ಮಾಡಿದ ಮಾನ್ವಿ ವಿಧಾನಸಭಾ ಕ್ಷೇತ್ರದ ಶಾಸಕರಾದ ಶ್ರೀ ಜಿ ಹಂಪಯ್ಯ ನಾಯಕ್ ಸಾಹುಕಾರ್ ಇವರು. ಉದ್ಘಾಟಿಯನ್ನು ನೆರವೇರಿಸಿ ಉದ್ಘಾಟನಾ ನುಡಿಯನ್ನು ನೋಡಿದ ಮಾನ್ಯ ಶಾಸಕರು ಚಿಕ್ಕ ಪ್ರಮಾಣದಲ್ಲಿ ಪ್ರಾರಂಭವಾಗಿ ಇಂದು ಭವ್ಯವಾದ ಕಟ್ಟಡದಲ್ಲಿ ಎಸ್ ವಿ ಎಸ್ ಶಾಲೆಯ ಆಡಳಿತ ಮಂಡಳಿಯ ಜವಾಬ್ದಾರಿ ಅಂಜನಾರೆಡ್ಡಿ ದಂಪತಿಗಳು ಈ ಶಾಲೆಯ ಶೈಕ್ಷಣಿಕ ಬೆಳವಣಿಗೆಯಲ್ಲಿ ತುಂಬಾ ಮಹತ್ವವಾದ ಕಾರ್ಯವನ್ನು ನಿರ್ವಹಿಸುತ್ತಿರುವುದು ಅಂಜನಾ ರೆಡ್ಡಿ ಅವರ ತಂದೆ ಈ ಶಾಲೆಯ ಅಧ್ಯಕ್ಷರಾದ ತಿರುಪತಿ ರೆಡ್ಡಿ ಅವರು ಮೂಲತಃ ರೈತ ಪ್ರತಾಪ್ ವರ್ಗದಿಂದ ಬಂದವರು ಹಲವು ಕಷ್ಟಗಳನ್ನು ಎದುರಿಸಿ
ತಮ್ಮ ಮಕ್ಕಳಿಗೆ ಒಳ್ಳೆಯ ವಿದ್ಯಾಭ್ಯಾಸವನ್ನು ಕೊಡಿಸಿ ಈ ದಿನ ಶಾಲೆಯ ಮುಖ್ಯಸ್ಥರಾಗಿರುವುದು ನನಗೆ ತುಂಬಾ ಸಂತೋಷ ತಂದಿದೆ ಎಂದು ಹೇಳಿದರು.

ಮನುಷ್ಯ ಹುಟ್ಟು ಸಾವಿನ ಮಧ್ಯೆ ತಾನು ಸಂಪಾದಿಸಿದ ಆಸ್ತಿ ತನ್ನ ಜೊತೆಯಲ್ಲಿ ಅದೇನಾದರೂ ತೆಗೆದುಕೊಂಡು ಹೋಗುತ್ತಾನೆ ಎಂದರೆ ಶಿಕ್ಷಣ ಎಂಬ ಮೂರು ಅಕ್ಷರವನ್ನು ಜೊತೆಯಲ್ಲಿ ತೆಗೆದುಕೊಂಡು ಹೋಗುತ್ತಾನೆ ಎಂಬುದು ನಾವು ಅರಿತುಕೊಳ್ಳಬೇಕು.
ನಮ್ಮ ರಾಜ್ಯ ಸರ್ಕಾರವು ಸಹ ಶಿಕ್ಷಣಕ್ಕೆ ಹತ್ತು ಹಲವು ಯೋಜನೆಗಳನ್ನು ನೀಡುತ್ತಿರುವುದು ಕಲ್ಯಾಣ ಕರ್ನಾಟಕ ಅಭಿವೃದ್ಧಿ




ಮಂಡಳಿ ಯೋಜನೆ ಅಡಿಯಿಂದ ಈ ಭಾಗದ ಶಿಕ್ಷಣ ಗೋಸ್ಕರ ವಾರ್ಷಿಕ ಅಭಿವೃದ್ಧಿ ಮಂಡಳಿಗೆ ಬರುವ 5,000 ಕೋಟಿ ರೂಪಾಯಿಗಳ ಅನುದಾನದಲ್ಲಿ ಶೇಕಡ 25 ರಷ್ಟು ಶಿಕ್ಷಣಕ್ಕೆ ಮೀಸಲಾಡುತ್ತಿರುವುದು ನಮ್ಮ ಭಾಗದ ಸಂಪೂರ್ಣ ಸಾಕ್ಷರತವಾಗಲಿ ಎಂಬುದು ಸರ್ಕಾರದ ದೃಢ ಸಂಕಲ್ಪವಾಗಿದೆ ಎಂದು ಹೇಳಿದರು.

ಈ ಸಂದರ್ಭದಲ್ಲಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರಾದ ಅಬ್ದುಲ್ ಗಫುರ್ ಸಾಬ್, ಪಂಚ ಗ್ಯಾರೆಂಟಿ ಅಧ್ಯಕ್ಷರಾದ ಬಿಕೆ ಅಂಬರೇಶಪ್ಪ ವಕೀಲರು, ಕಾರ್ಯಕ್ರಮದ ಸಾನಿಧ್ಯವನ್ನು ಬಸವ ಶ್ರೀ ಇರಕಲಮಠ,ಖಾಸಗಿ ಶಿಕ್ಷಣ ಸಂಸ್ಥೆಗಳ ಅಧ್ಯಕ್ಷರಾದ ರಾಜ ಸುಭಾಷ್ ಚಂದ್ರ ನಾಯಕ್, ಸೈಯದ್ ಖಾಲಿದ್ ಖಾದ್ರಿ, ಗುಡದಿನ್ನಿ ಶರಣಯ್ಯ ನಾಯಕ್,ಖಾಸಗಿ ಶಿಕ್ಷಣ ಸಂಸ್ಥೆಗಳ ಕಾರ್ಯದರ್ಶಿಗಳಾದ ರಾಜು ತಾಳಿಕೋಟೆ, ದೇವೇಂದ್ರಪ್ಪ ಬೊಮ್ಮನಾಳ, ಮಾನ್ವಿ ತಾಲೂಕಿನ ವಿವಿಧ ಖಾಸಗಿ ಶಿಕ್ಷಣ ಸಂಸ್ಥೆಗಳ ಮುಖ್ಯಸ್ಥರು ಇನ್ನಿತರರು ಉಪಸ್ಥಿತರಿದ್ದರು.

## ವಿದ್ಯಾರ್ಥಿಗಳಿಂದ ಭರ್ಜರಿ ಸ್ಪಂದನೆ ಬಿ.ವಿ.ಆರ್ ಟ್ಯಾಲೆಂಟ್ ಸರ್ಚ್ ಪರೀಕ್ಷೆ ಯಶಸ್ವಿ

ಧೈರ್ಯದ ದಾರಿ

**ಮಾನ್ವಿ :** ಪಟ್ಟಣದ ಬಿ ವಿ ಆರ್ ಇಂಟರ್ ನ್ಯಾಷನಲ್ ಶಾಲಾ ಕಟ್ಟಡದಲ್ಲಿ ಭಾನುವಾರ ನಡೆದ ಬಿ.ವಿ.ಆರ್ ಟ್ಯಾಲೆಂಟ್ ಸರ್ಚ್ ಪರೀಕ್ಷೆ ಅತ್ಯಂತ ಯಶಸ್ವಿಯಾಗಿ ಜರುಗಿತು. ಈ ಸಂದರ್ಭದಲ್ಲಿ ಸಂಸ್ಥೆಯ ವತಿಯಿಂದ ಪರೀಕ್ಷೆಯ ಉದ್ದೇಶ ಹಾಗೂ ವಿದ್ಯಾರ್ಥಿಗಳ ಪ್ರತಿಭೆಯನ್ನು ಉತ್ತೇಜಿಸುವ ಬಗ್ಗೆ ಅಧ್ಯಕ್ಷ ಬಿ.ವಿ.ರೆಡ್ಡಿ ಮಾತನಾಡಿದರು.
ಯು ಕೆ ಜಿ ರಿಂದ 8ನೇ ತರಗತಿ ವರೆಗೆ ಬೆಳಿಗ್ಗೆ ಹಾಗೂ ಮಧ್ಯಾಹ್ನ ಅವಧಿಯಲ್ಲಿ ಪರೀಕ್ಷೆ ನಡೆಸಲಾಗಿದ್ದು, ಮಾನ್ವಿ ತಾಲೂಕು ಸೇರಿದಂತೆ ಸುತ್ತಮುತ್ತಲಿನ ಹಳ್ಳಿಗಳಿಂದ ಸುಮಾರು 2000 ವಿದ್ಯಾರ್ಥಿಗಳು ಭಾಗವಹಿಸಿ ಪರೀಕ್ಷೆಯನ್ನು ಬರೆದರು. ಉತ್ತೀರ್ಣರಾದ ವಿದ್ಯಾರ್ಥಿಗಳಿಗೆ ಮೆಡಲ್ ಹಾಗೂ ಪ್ರಮಾಣಪತ್ರಗಳನ್ನು ನೀಡಲಾಯಿತು.
ಈ ಟ್ಯಾಲೆಂಟ್ ಸರ್ಚ್ ಪರೀಕ್ಷೆಯ ಅಭೂತಪೂರ್ವ ಯಶಸ್ಸಿಗೆ



ಸಂತೋಷ ವ್ಯಕ್ತಪಡಿಸಿದ ಸಿ.ಇ.ಓ ಶಿವರಾಜ್ ಹಾಗೂ ಅಧ್ಯಕ್ಷ ಬಿ.ವಿ.ರೆಡ್ಡಿ, ತಮ್ಮ ಮಕ್ಕಳನ್ನು ಪರೀಕ್ಷೆಗೆ ಕರೆತಂದ ಪಾಲಕರಿಗೆ ಧನ್ಯವಾದಗಳನ್ನು ತಿಳಿಸಿದರು.

ಮೊದಲನೇ ಪುಟದಿಂದ

# ತಾಲೂಕು ಕನ್ನಡ ಸಾಹಿತ್ಯ ಪರಿಷತ್ತು ವತಿಯಿಂದ ದತ್ತಿ ಉಪನ್ಯಾಸ

ಮಾಜಿ ಎ.ಪಿ.ಎಂ.ಸಿ. ಸದಸ್ಯರಾದ ಶಿವರಾಜ ನಾಯಕ ಮಾತನಾಡಿ ಕ.ಸಾ.ಪ ತಾಲೂಕು ಘಟಕವು ದತ್ತಿ ದಾನಿಗಳು ನೀಡಿದ ವಿವಿಧ ವಿಷಯಗಳ ಕುರಿತು ಶಾಲೆಗಳಲ್ಲಿ ಉಪನ್ಯಾಸಕರಿಂದ ಉಪನ್ಯಾಸವನ್ನು ನೀಡುವ ಮೂಲಕ ಮಕ್ಕಳಲ್ಲಿ ಕನ್ನಡ ಭಾಷೆಯ ಕುರಿತು ಜ್ಞಾನವನ್ನು ಹೆಚ್ಚಿಸುತ್ತಿದೆ ಎಂದು ತಿಳಿಸಿದರು.

ಆರ್. ಲಲಿತಮ್ಮನವರ ಹೆಸರಿನ ದತ್ತಿ ವಿಷಯ ಕನ್ನಡ ಸಾಹಿತ್ಯ ಕುರಿತು ನಿವೃತ್ತ ಮುಖ್ಯಗುರುಗಳಾದ ಮಹಿಮೂದಬೇಗಂ, ದಿ. ಮನೋರಂಜನ ಹೆಸರಿನಲ್ಲಿ ವಚನ ಸಾಹಿತ್ಯ ವಿಷಯದ ಕುರಿತು ಜಿ.ಎಂ. ರಂಗಪ್ಪ ಮೇದಾ ಉಪನ್ಯಾಸ ನೀಡಿದರು. ಹಿರಿಯ ಸಾಹಿತಿ ಅಂಬಮ್ಮ ಪ್ರತಾಪಸಿಂಗ್ ರವರು ಸಾಹಿತ್ಯ ಕ್ಷೇತ್ರದಲ್ಲಿ ಸಲ್ಲಿಸಿದ ಕೃಷಿಗಾಗಿ ದಿ.ಕುಂಬಳೂರು ಆದಮ್ಮ ಈರಣ್ಣ ಸ್ಮಾರಕ ದತ್ತಿ ಪ್ರಶಸ್ತಿಯನ್ನು ನೀಡಿ ಗೌರವಿಸಲಾಯಿತು. ಎಂ.ಮಲ್ಲಿಕಾರ್ಜುನಗೌಡ ಪೋತ್ನಾಳ ರವರು ಹೊಸದಾಗಿ ಕಸಾಪಗೆ ಮರಿಲಿಂಗಣ್ಣಗೌಡ ಸ್ಮಾರಕ ದತ್ತಿಯನ್ನು ನೀಡಿದರು.

ಕಾರ್ಯಕ್ರಮದಲ್ಲಿ ತಾ.ಕ.ಸಾ.ಪ. ಅಧ್ಯಕ್ಷರಾದ ಶರಣಬಸವ ನೀರಮಾನ್ವಿ , ಬಿವಿಆರ್ ಶಿಕ್ಷಣ ಸಂಸ್ಥೆ ಅಧ್ಯಕ್ಷ ಬಿ.ವಿ.ರೆಡ್ಡಿ, ಕಸಾಪ ಕಳಿಂಗ ಕಾಲೇಜಿನ ಆಡಳಿತಾಧಿಕಾರಿ ದತ್ತಾತ್ರೇಯ ಮೇಟಿ, ಹೆಚ್.ಶರ್ಫುದ್ದೀನ್ ಪೋತ್ನಾಳ,ಚಂದ್ರಶೇಖರ ಸುಟ್ಟಹಟ್ಟಿ, ಉಪನ್ಯಾಸಕಿ ಲಾವಣ್ಯ, ಲಕ್ಷ್ಮಣ ಜಾನೇಕಲ್, ಹನುಮಂತ ಕೊಟ್ನೆಕಲ್, ಸೈಯ್ಯದ್ ಹುಸೇನ್ ಸಾಹೇಬ್, ಡಾ.ಚನ್ನಬಸವ ಮಾಡಗಿರಿ, ಡಾ.ಬಸವರಾಜ ಸುಂಕೇಶ್ವರ ಸೇರಿದಂತೆ ಇನ್ನಿತರು ಇದ್ದರು.

# ಇಂಧನ ಅಭಾವವಿಲ್ಲ: ವದಂತಿಗಳಿಗೆ ಕಿವಿಗೊಡಬೇಡಿ

## ಸಿರವಾರ ತಹಸೀಲ್ದಾರ್ ಅಶೋಕ ಪವಾರ್ ಭರವಸೆ; ಪೆಟ್ರೋಲ್ ಬಂಕ್ ಮಾಲೀಕರ ಸಭೆ

**ಸಭೆಯ ಪ್ರಮುಖ ಮುಖ್ಯಾಂಶಗಳು:**

**ಪೂರೈಕೆಯಲ್ಲಿನ ವಿಳಂಬಕ್ಕೆ ಕಾರಣ:** ಸತತ ರಜೆಗಳು ಬಂದಿದ್ದರಿಂದ ಹಾಗೂ ನಗದು ಪಾವತಿ ಪ್ರಕ್ರಿಯೆಯಲ್ಲಿನ ತಾಂತ್ರಿಕ ಕಾರಣಗಳಿಂದ ಇಂಧನ ಸರಬರಾಜಿನಲ್ಲಿ ಸಲ್ಪ ವ್ಯತ್ಯಯ ಉಂಟಾಗಿತ್ತು. ಇದನ್ನೇ ಅಭಾವ ಎಂದು ತಪ್ಪಾಗಿ ಅರ್ಥೈಸಲಾಗಿದೆ.

ಪ್ರಸ್ತುತ ಸ್ಥಿತಿ: ಪ್ರಸ್ತುತ ಇಂಧನ ಸರಬರಾಜು ಸುಗಮವಾಗಿದ್ದು, ತಾಲೂಕಿನಲ್ಲಿ ಯಾವುದೇ ರೀತಿಯ ಪೆಟ್ರೋಲ್ ಅಥವಾ ಡೀಸೆಲ್ ಕೊರತೆಯಿಲ್ಲ.

**ಮಾಲೀಕರಿಗೆ ಸೂಚನೆ:** ಯಾವುದೇ ಬಂಕ್‌ನಲ್ಲಿ ಸ್ಟಾಕ್ ಇಲ್ಲವೆಂದು ಸುಳ್ಳು ಹೇಳಬಾರದು. ಒಂದು ವೇಳೆ ಇಂಧನ ಇಲ್ಲವೆಂದು ಸಾರ್ವಜನಿಕರಿಗೆ ತೊಂದರೆ ನೀಡಿದರೆ ಅಂತಹವರ ವಿರುದ್ಧ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಲಾಗುವುದು.

**ಗ್ಯಾಸ್ ಏಜೆನ್ಸಿಗಳಿಗೆ ಎಚ್ಚರಿಕೆ:** ಗೃಹ ಬಳಕೆಯ ಸಿಲಿಂಡರ್‌ಗಳನ್ನು ಹೋಟೆಲ್ ಅಥವಾ ರೆಸ್ಟೋರೆಂಟ್‌ಗಳಿಗೆ ಅಕ್ರಮವಾಗಿ ಮಾರಾಟ ಮಾಡಬಾರದು. ಸಾರ್ವಜನಿಕರ ಗೃಹ ಬಳಕೆಗೆ ಯಾವುದೇ ತೊಂದರೆಯಾಗದಂತೆ ನೋಡಿಕೊಳ್ಳಬೇಕು.

"ಯಾವುದೇ ಕಾರಣಕ್ಕೂ ಸಾರ್ವಜನಿಕರು ಗಾಬರಿಗೊಳ್ಳುವ ಅಗತ್ಯವಿಲ್ಲ. ತಾಲೂಕಿನಲ್ಲಿ ಸಾಕಷ್ಟು ಇಂಧನ ದಾಸ್ತಾನು ಲಭ್ಯವಿದೆ. ವದಂತಿಗಳಿಗೆ ಕಿವಿಗೊಟ್ಟು ಮುಗಿಬೀಳಬೇಡಿ."

ಅಶೋಕ ಪವಾರ್, ತಹಸೀಲ್ದಾರ್, ಸಿರವಾರ.

ಈ ಸಭೆಯಲ್ಲಿ ಪೆಟ್ರೋಲ್ ಬಂಕ್ ಮಾಲೀಕರಾದ ಬಸವರಾಜ ಗಡ್ಲ, ಸುರೇಶ ಗಬ್ಬೂರು, ಸ್ವಾಮಿ, ಹರ್ಷವರ್ಧನ ಸೇರಿದಂತೆ ಹಲವರು ಉಪಸ್ಥಿತರಿದ್ದರು.

# ದಕ್ಷಿಣ ಕಾಶಿ ನಂಜನಗೂಡಿನಲ್ಲಿ ಪಂಚ ರಥೋತ್ಸವಕ್ಕೆ ಭಕ್ತ ಸಾಗರ

ಲಕ್ಷಾಂತರ ಭಕ್ತರು ರಥದ ಮೇಲೆ ಹೂವು ದವನ ಬಾಳೆಹಣ್ಣು ಎಸೆದು ಶ್ರೀಕಂಠೇಶ್ವರನಿಗೆ ಜಯವಾಗಲಿ ಓಂ ನಮಃ ಶಿವಾಯ ಎಂಬ ಘೋಷಣೆಗಳನ್ನು ಕೂಗಿ ಪುಳಕಿತಗೊಂಡರು. ಮೈಸೂರು ಸಮೀಪ ಇರುವ ನಂಜನಗೂಡು ಕ್ಷೇತ್ರ ಪುರಾಣ ಪ್ರಸಿದ್ಧವಾದ ಯಾತ್ರ ಸ್ಥಳವಾಗಿದೆ ಈ ಸ್ಥಳವು ದಕ್ಷಿಣ ಕಾಶಿ ಎಂದೇ ಪ್ರಸಿದ್ಧವಾಗಿದೆ ಪ್ರತಿ ವರ್ಷ ಕ್ಷೇತ್ರದಲ್ಲಿ ಮೀನ ಮಾಸದಲ್ಲಿ ಉತ್ತರ ನಕ್ಷತ್ರದ ದಿವಸ ಉತ್ತಮ ಲಗ್ನದಲ್ಲಿ ಪಂಚಮ ರಥೋತ್ಸವ ನಡೆಸಲಾಗುತ್ತದೆ.

ಪಂಚಮ ರಥಗೋಳಾದ ಗಣಪತಿ ಶ್ರೀಕಂಠೇಶ್ವರ ಪಾರ್ವತಿ ಸುಬ್ರಹ್ಮಣ್ಯ ಹಾಗೂ ಚಂಡಿಕೇಶ್ವರ ರಥಗಳನ್ನು ಈ ಸಂದರ್ಭದಲ್ಲಿ ಎಳೆಯಲಾಯಿತು. ನವರತ್ನಗಳಿಂದ ಕೂಡಿದ ಹೂವಿನ ಅಲಂಕಾರದಿಂದ ಶ್ರೀಕಂಠೇಶ್ವರ ಸ್ವಾಮಿ ವಿಗ್ರಹವನ್ನು ರಥದಲ್ಲಿ ಇರಿಸಲಾಗಿತ್ತು ಪಂಚಮ ರಥೋತ್ಸವ ಅಂಗವಾಗಿ ಶ್ರೀಕಂಠೇಶ್ವರ ದೇವಾಲಯವನ್ನು ವಿಶೇಷವಾಗಿ ಅಲಂಕರಿಸಲಾಗಿತ್ತು. ಪಟ್ಟಣದ ಬೀದಿಗಳನ್ನು ವೃತ್ತಗಳನ್ನು ವಿದ್ಯುತ್ ದೀಪಾವಲಂಕಾರಗಳನ್ನು ಮಾಡಲಾಗಿತ್ತು ಪ್ರತಿಯೊಂದು ಮನೆಯ ಮುಂದೆ ರಂಗವಲ್ಲಿ ಹಾಕಿ ಮತ್ತಷ್ಟು ಮೆರಗು ನೀಡಲಾಯಿತು.

ರಾತ್ರಿ ಬೆಳಿಗ್ಗೆ ಹಲವು ಸಂಘ ಸಂಸ್ಥೆಗಳು ಜಾತ್ರೆಗೆ ಬಂದಿದ್ದ ಭಕ್ತಾದಿಗಳಿಗೆ ಮಜ್ಜಿಗೆ ಪಾನಕ ಲಾಡು ಹಣ್ಣುಗಳು ತರಕಾರಿ ಬಾತ್ ಮೊಸರು ಅನ್ನ ನೀಡುತ್ತಿದ್ದರು ಇದರ ಜೊತೆಗೆ ದೇವಾಲಯದ ದಾಸೋಹದಲ್ಲಿ ಕೂಡ ಪ್ರಸಾದ ವಿನಯದ ಮಾಡಲಾಗಿತ್ತು ರಥೋತ್ಸವದ ಅಂಗವಾಗಿ ವಿವಿಧ ಧಾರ್ಮಿಕ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮವನ್ನು ಏರ್ಪಡಿಸಲಾಗಿತ್ತು. ಈ ರಥೋತ್ಸವ ಸುತ್ತಮುತ್ತಲ ನಾಡಿನಲ್ಲಿ ದೊಡ್ಡ ಜಾತ್ರೆ ಎಂದೇ ಖ್ಯಾತವಾಗಿದ್ದು ರಥೋತ್ಸವದೊಂದು ವಿಶೇಷವಾಗಿ ನವದಂಪತಿಗಳು ಹೆಚ್ಚಿನ ಸಂಖ್ಯೆಯಲ್ಲಿ ಬಂದು ಹಣ್ಣುದವನ ಹಾಕಿ ಭಾಗವಹಿಸುವರು.

ಪೊಲೀಸ್ ಇಲಾಖೆ ವತಿಯಿಂದ ಜಾತ್ರೆಗೆ ಹೆಚ್ಚಿನ ಸಿಬ್ಬಂದಿಯಾಗಿ ಯಾವುದೇ ರೀತಿಯ ಅಹಿತಕರ ಘಟನೆ ನಡೆಯದಂತೆ ಮತ್ತು ರಥದ ಸುತ್ತ ಯಾವ ಭಕ್ತಾದಿಗಳು ಹೋಗದಂತೆ ಮುನ್ನೆಚ್ಚರಿಕೆ ಕ್ರಮ ತೆಗೆದುಕೊಳ್ಳಲಾಯಿತು . ಇದರ ಜೊತೆಗೆ ಕಪಿಲ ದಡದ ತೀರದಲ್ಲೂ ಕೂಡ ಭಕ್ತಾದಿಗಳಿಗೆ ಹೆಚ್ಚಿನ ಅನುಕೂಲ ಮಾಡಿಕೊಡಲಾಗಿತ್ತು ದೇವಸ್ಥಾನದ ಆಡಳಿತ ಮಂಡಳಿ ವತಿಯಿಂದ ಕೂಡ ಜಾತ್ರೆಗೆ ಕ್ರಮ ಕೈಗೊಳ್ಳಲಾಗಿತ್ತು ಒಟ್ಟಾರೆ ರಥೋತ್ಸವಕ್ಕೆ ಆಗಮಿಸಿದ ಭಕ್ತಾದಿಗಳಿಗೆ ಜಿಲ್ಲಾಡಳಿತ ಮುಜರಾಯಿ ಇಲಾಖೆ ಹಾಗೂ ಪುರಸಭೆ ಶ್ರೀಕಂಠೇಶ್ವರ ಆಡಳಿತ ಮಂಡಳಿ ಎಲ್ಲಾ ರೀತಿಯ ಸೌಲಭ್ಯ ಕಲ್ಪಿಸಿತು ಭದ್ರತೆಗಾಗಿ ಹೆಚ್ಚಿನ ಪೊಲೀಸ್ ಬಂದೋಬಸ್ ಮಾಡಲಾಗಿತ್ತು.ಶ್ರೀಕಂಠೇಶ್ವರ ದೇವಾಲಯದ ಇಒ ಕೃಷ್ಣರವರು ಮುಂಜಾಗ್ರತ ಕ್ರಮವಾಗಿ ದೊಡ್ಡ ಜಾತ್ರೆಗೆ ಸಂಬಂಧಪಟ್ಟಂತೆ ಎಲ್ಲರ ಜೊತೆ ಕೈಜೋಡಿಸಿ ಬರುವ ಭಕ್ತಾದಿಗಳಿಗೆ ಎಲ್ಲಾ ರೀತಿಯ ಮೂಲಭೂತ ಸೌಕರ್ಯಗಳನ್ನು ಒದಗಿಸಿಕೊಟ್ಟಿದ್ದರು. ಒಟ್ಟಾರೆ ಎಲ್ಲಾ ಅಧಿಕಾರಿಗಳಿಂದ ಈ ಬಾರಿಯೂ ದೊಡ್ಡ ಜಾತ್ರೆ ವಿಜೃಂಭಣೆಯಿಂದ ನಡೆಯಿತು.ರಥೋತ್ಸವದ ಸಂದರ್ಭದಲ್ಲಿ ಶಾಸಕ ದರ್ಶನ್ ಧ್ರುವ ನಾರಾಯಣ್, ಜಿಲ್ಲಾಧಿಕಾರಿ ಲಕ್ಷ್ಮಿಕಾಂತ್ ರೆಡ್ಡಿ, ಎಡಿಎ ಶಿವರಾಜ್, ಮಾಜಿ ಶಾಸಕ ಕಳಲೆ ಕೇಸವಮೂರ್ತಿ, ಶ್ರೀಕಂಠೇಶ್ವರ ದೇವಾಲಯದ ಧರ್ಮದರ್ಶಿಗಳಾದ ಗೋಪಾಲಕೃಷ್ಣ, ಗೋವಿಂದರಾಜು, ಮಾಜಿ ನಗರಸಭೆ ಅಧ್ಯಕ್ಷ ಶ್ರೀಕಂಠ, ಶ್ರೀಧರ, ಮಂಜುನಾಥ್, ಮಾದಪ್ಪ ಸೇರಿದಂತೆ ಮಾಜಿ ನಗರಸಭೆ ಸದಸ್ಯರು ಗ್ರಾಮ ಪಂಚಾಯತಿ ಜಿಲ್ಲಾ ಪಂಚಾಯತಿ ತಾಲೂಕು ಪಂಚಾಯಿತಿ ಮಾಜಿ ಸದಸ್ಯರುಗಳು ಗಡಿ ಯಜಮಾನರುಗಳು ವಿವಿಧ ತಾಲೂಕಿನ ಗ್ರಾಮಸ್ಥರು ಮತ್ತು ಲಕ್ಷಾಂತರ ಭಕ್ತಾದಿಗಳು ಭಾಗಿಯಾಗಿದ್ದರು.

**ಜನಜಂಗುಳಿಗೆ ಸಿಲುಕಿ ಭಕ್ತ ಸಾವು**

ಪ್ರಸಿದ್ಧ ರಥೋತ್ಸವದ ವೇಳೆ ದುರ್ಘಟನೆ ಸಂಭವಿಸಿದ್ದು, ಒಬ್ಬ ಭಕ್ತ ಸಾವನ್ನಪ್ಪಿರುವ ಘಟನೆ ನಡೆದಿದೆ.

ಮೃತರನ್ನು 56 ವರ್ಷದ ನಂಜುಂಡಸ್ವಾಮಿ ಎಂದು ಗುರುತಿಸಲಾಗಿದ್ದು, ಅವರು ಬೆಂಗಳೂರಿನ ಮಾಗಡಿ ನಿವಾಸಿಯಾಗಿದ್ದಾರೆ. ರಥೋತ್ಸವಕ್ಕೆಂದು ಆಗಮಿಸಿದ್ದ ನಂಜುಂಡಸ್ವಾಮಿ, ಜನಜಂಗುಳಿಯಲ್ಲಿ ಸಿಲುಕಿ ಗಂಭೀರವಾಗಿ ಗಾಯಗೊಂಡಿದ್ದಾರೆ. ತಕ್ಷಣ ಆಸ್ಪತ್ರೆಗೆ ಕರೆದೊಯ್ಯಲಾಯಿತಾದರೂ ಚಿಕಿತ್ಸೆ ಫಲಕಾರಿಯಾಗದೆ ಮೃತಪಟ್ಟಿದ್ದಾರೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

# ವಿದ್ಯಾರ್ಥಿ ವೇತನವನ್ನು ಸದ್ಬಳಕೆ ಮಾಡಿಕೊಳ್ಳಿ' ಹನುಮಂತಪ್ಪ.




ಧೈರ್ಯದ ದಾರಿ

**ಸಿರವಾರ.ಮಾ29–** ಪದವಿ ವಿದ್ಯಾಭ್ಯಾಸದ ನಂತರ ಉನ್ನತ ಅಭ್ಯಾಸಕ್ಕಾಗಿ ಹಲವಾರು ವಿದ್ಯಾರ್ಥಿ ವೇತನಗಳ ಸೌಲಭ್ಯಗಳಿದ್ದು, ಅವುಗಳನ್ನು ಸದ್ಬಳಕೆ ಮಾಡಿಕೊಂಡು ಹೆಚ್ಚಿನ ವಿದ್ಯಾಭ್ಯಾಸ ಮಾಡಿಕೊಂಡು ಅತ್ಯುನ್ನತ ಸ್ಥಾನ ಪಡೆಯಬೇಕು ಎಂದು ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಪ್ರಾಂಶುಪಾಲರಾದ ಹನು ಮಂತಪ್ಪ ಕೊರಪುರ ವಿದ್ಯಾರ್ಥಿಗಳಿಗೆ ಸಲಹೆ ನೀಡಿದರು.ಪಟ್ಟಣದ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಐಕ್ಯು ಎಸಿ ಮತ್ತು ವಿದ್ಯಾರ್ಥಿ ವೇತನ ಕೋಶದ ವತಿಯಿಂದ ಹಮ್ಮಿ ಕೊಂಡಿದ್ದ ವಿದ್ಯಾರ್ಥಿ ವೇತನದ ಕುರಿತು ಮಾಹಿತಿ ಕಾರ್ಯಕ್ರಮ ಮತ್ತು ವಿಶ್ವ ಮಹಿಳಾ ದಿನಾಚರಣೆ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು. ಕಾಲೇಜಿನ ಸಹಾಯಕ ಪ್ರಾಧ್ಯಾಪಕ ಮತ್ತು ವಿದ್ಯಾರ್ಥಿ ವೇತನ ಕೋಶದ ಸಂಯೋಜಕ ಎಸ್.ಸುಭಾನ್ ಸಾಬ್ ಪದವಿ ವಿದ್ಯಾರ್ಥಿಗಳಿಗೆ ಲಭ್ಯವಿರುವ ವಿದ್ಯಾರ್ಥಿ ವೇತನದ ಬಗ್ಗೆ ವಿವರ ವಾದ ಮಾಹಿತಿಗಳನ್ನು ಹಂಚಿಕೊಂಡರು. ಕವಿತಾಳ ಸರ್ಕಾರಿ ಪ್ರಥಮ ದರ್ಜೆ ಪ್ರಾಧ್ಯಾಪಕಿ ಪ್ರೇಮಾ ಮಾತನಾಡಿ, ರಾಜಕೀಯ ಕ್ಷೇತದಲ್ಲಿ ಮಹಿಳಾ ನಾಯಕತ್ವ, ಸವಾಲುಗಳು ಮತ್ತು ಅವಕಾಶಗಳ ಕುರಿತು ವಿಶೇಷ ಉಪನ್ಯಾಸ ನೀಡಿದರು. ವಿ.ವಿನಯ ಶಂಕರ ಕಾರ್ಯಕ್ರಮದ ನಿರೂಪಣೆ ನಿರ್ವಹಿಸಿದರು. ಮಹಿಳಾ ಸಬಲೀಕರಣದ ಸಂಯೋಜಕಿ ಪದ್ಮಾವತಿ, ಕನ್ನಡ ಭಾಷಾ ವಿಭಾಗದ ಉಪನ್ಯಾಸಕ ಹಂದೇರ ಮೂಗವ್ವ, ಸಹಾಯಕ ಪ್ರಾಧ್ಯಾಪಕ ಲಕ್ಷಣ ಯಾದವ, ಮುತ್ತಪ್ಪ, ಅಶೋಕ ಬೋಧಕ ಸಿಬ್ಬಂದಿ,ವಿದ್ಯಾರ್ಥಿಗಳು ಭಾಗವಹಿಸಿದ್ದರು

# ಸಮಸಮಾಜ ನಿರ್ಮಾಣಕ್ಕಾಗಿ ಅಗ್ನಿ ಬನ್ನಿ ರಾಯ ಸ್ವಾಮಿ ಅವತರಿಸಿದರು: ಡಾ. ಬಿರಾದಾರ



ಧೈರ್ಯದ ದಾರಿ

**ರಾಯಚೂರು:** ಸಮಾಜದಲ್ಲಿನ ಸ್ತ್ರೀ ರಕ್ಷಣೆ, ಗೋ ರಕ್ಷಣೆ ಮತ್ತು ಭಕ್ತ ರಕ್ಷಣೆಗಾಗಿ ರಾಕ್ಷಸರನ್ನು ಸಂವಹರಿಸಲು ಅಗ್ನಿಕುಂಡದಿಂದ ಮಹಾಪುರುಷ ಅಗ್ನಿ ಬನ್ನಿ ರಾಯ ಸ್ವಾಮಿ ಅವತರಿಸಿದರು

ಎಂದು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಸಹ ಕಾರ್ಯದರ್ಶಿ ದಂಡಪ್ಪ ಬಿರಾದಾರ ಹೇಳಿದರು.

ಜಿಲ್ಲಾಡಳಿತ,ಜಿಲ್ಲಾ ಪಂಚಾಯತ್, ಮಹಾನಗರ ಪಾಲಿಕೆ ಮತ್ತು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಇವರ ಸಂಯುಕ್ತ ಆಶ್ರಯದಲ್ಲಿ ಮಾರ್ಚ 29ರಂದು ನಡೆದ ಅಗ್ನಿ ಬನ್ನಿ ರಾಯ ಸ್ವಾಮಿ ಜಯಂತಿ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು. ಅಗ್ನಿ ಬನ್ನಿ ರಾಯಸ್ವಾಮಿಯವರು ಹಲವಾರು ಸಾಮಾಜಿಕ ಸೇವಾ ಕಾರ್ಯಗಳನ್ನು ಮಾಡಿದರು. ಸಮ ಸಮಾಜ ನಿರ್ಮಾಣಕ್ಕೆ ಶ್ರಮಿಸಿದರು.

ಸಮಾಜದಲ್ಲಿ ಅಶಾಂತಿ, ಅನ್ಯಾಯ ಅಧರ್ಮ ಹೆಚ್ಚಾದಾಗ ಅವತಾರ ಪುರುಷರು ಹುಟ್ಟುತ್ತಾರೆ. ಅದರಂತೆ ಅಗ್ನಿ ಬನ್ನಿ ರಾಯಸ್ವಾಮಿಯವರು ಧರ್ಮ ಉದ್ಧಾರ ಮಾಡಲು ತಲೆ ಮೇಲೆ ಕಿರೀಟ ಹೊತ್ತು, ಬಿಳಿ ಕುದುರೆ ಏರಿ, ಖಡ್ಗ ಹಿಡಿದು ವಾತಾಪಿ ರಾಕ್ಷಸರ ಸಂಹಾರ ಮಾಡಿ ಸಮಾಜದಲ್ಲಿ ಶಾಂತಿ ಸ್ಥಾಪನೆ ಮಾಡಿದರು. ಇವರು ಇಂದ್ರನ ಮಗಳಾದ ಮಂತ್ರಿ ಮಾಲೆಯನ್ನು ಮದುವೆಯಾದ ನಂತರ ಹಲವು ಮಕ್ಕಳಿಗೆ ಜನ್ಮ ಕೊಡುತ್ತಾರೆ. ಬೆಂಗಳೂರು, ಮೈಸೂರು, ಹಾಸನದಲ್ಲಿ ತಿಗಳ ಸಮಾಜದವರು ಹೆಚ್ಚಾಗಿದ್ದು, ಪ್ರತಿ ವರ್ಷವೂ ಈ ಸಮಾಜದವರು ಅಗ್ನಿಯ ಕ್ಷತ್ರಿಯ ಕುಲದೈವ ಅಗ್ನಿ ಬನ್ನಿರಾಯ ಸ್ವಾಮಿ ಜಯಂತಿಯನ್ನು ಅತ್ಯಂತ ಅರ್ಥಪೂರ್ಣವಾಗಿ ಆಚರಣೆ ಮಾಡುತ್ತಾರೆ. ವಿಶೇಷವಾಗಿ ತಿಗಳ ಸಮುದಾಯದವರು ತೋಟಗಾರಿಕೆ ಮತ್ತು ಉದ್ಯಾನ ನಿರ್ಮಾಣ ಮಾಡುವಲ್ಲಿ ಮಹತ್ವದ ಪಾತ್ರ ವಹಿಸಿದ್ದಾರೆ. ಬೆಂಗಳೂರಿನಲ್ಲಿ ಮಹತ್ವದ ಉದ್ಯಾನ ನಿರ್ಮಾಣ ಮಾಡಿದ್ದಾರೆ. ತಿಗಳ ಸಮುದಾಯದ ಜನರು ಈ ಕ್ಷೇತ್ರದಲ್ಲಿ ಹೆಚ್ಚು ಪರಿಣಿತಿ ಹೊಂದಿದ್ದರು ಎಂದು ಡಾ. ಬಿರಾದಾರ ಹೇಳಿದರು.

ಈ ಸಂದರ್ಭದಲ್ಲಿ ಮೋಹನ್ ಸಿರಿನ್ ಹಸಲ್ಮಾ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಿಬ್ಬಂದಿ ವಿನೋದ್, ಶೈಲಜಾ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

# ಗಣಜಲಖೇಡ ಕೊಲೆ ಪ್ರಕರಣ:ಗ್ರಾಪಂ ಅಧ್ಯಕ್ಷ ಶ್ರೀಧರ ಸೇರಿ ಮೂವರ ಖುಲಾಸೆ

**ಕಲಬುರಗಿ:** ಇಲ್ಲಿಗೆ ಸಮೀಪದ ಗಣಜಲಖೇಡ ಗ್ರಾಮದಲ್ಲಿ ವ್ಯಕ್ತಿ ಓರ್ವನನ್ನು ಕೊಲೆ ಮಾಡಿದ್ದಾರೆಂದು ಆರೋಪಿ ಚಾರ್ಜ ಶೀಟ್ ಸಲ್ಲಿಸಲಾಗಿದ್ದ ಪ್ರಕರಣದಲ್ಲಿ ಆಪಾದಿತರಾಗಿದ್ದ ಗಣಜಲಖೇಡ ಗ್ರಾಮ ಪಂಚಾಯತ ಅಧ್ಯಕ್ಷ ಶ್ರೀಧರ ಪಾಟೀಲ ಹಾಗೂ ಅವರ ತಂದೆ ಮತ್ತು ಸಹೋದರರನ್ನು ಇಲ್ಲಿನ ಮೂರನೇ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ ಖುಲಾಸೆಗೊಳಿಸಿ ಶನಿವಾರ ತೀರ್ಪು ನೀಡಿದೆ.2018 ರ ಆ. 5 ರಂದು ರಂದು ರಾತ್ರಿ 8.31 ಗಂಟೆಗೆ ಕೊಲೆ ಘಟನೆಯಾಗಿತ್ತೆಂದು ಫಿರ್ಯಾದಿಯಲ್ಲಿಆರೋಪಿಸಿದಾಗ ಗ್ರಾಮೀಣ ಪೊಲೀಸ ಠಾಣೆಯ ಪೊಲೀಸರು ಶ್ರೀಧರ ಪಾಟೀಲ ಹಾಗೂ ಆತನ ತಂದೆ, ಸಹೋದರರ ಮತ್ತು ಆತನ ದೊಡ್ಡಪ್ಪ ಇವರ ಮೇಲೆ ಗುನ್ನೆ ನಂ : 250/2018 ಎಂದು ಗುನ್ನೆ ದಾಖಲಿಸಿ ಮುಂದೆ ಚಾರ್ಟ ಶೀಟ್ ಹಾಕಿದ್ದರು.ಫಿರ್ಯಾದಿದಾರ ಮಂಜುನಾಥ ಜೇವರ್ಗಿ ಗಣಜಲಖೇಡ್ ಇವರು ಪೊಲೀಸರಿಗೆಫಿರ್ಯಾದಿ ಕೊಟ್ಟಿದ್ದರು. ಮಂಜುನಾಥ ಜೇವರ್ಗಿಯವರ ತಂದೆ ಈರಪ್ಪಾ ಅವರಿಗೆ ಆರೋಪಿತರು ಎಲ್ಲರು ಸೇರಿ ಕೊಲೆ ಮಾಡಿದ್ದಾರೆಂದು ಆರೋಪಿಸಿದರು.ಆದರೆ ವಾಸ್ತವಾಗಿ ಮಂಜುನಾಥ ಜೇವರ್ಗಿ ಅವರ ತಾಯಿ ಸರಕಾರದಿಂದ ತನ್ನ ಗಂಡ ಹಮಾಲನೆಂದು(ಕೂಲಿ ಕಾರ್ಮಿಕರ) ಕಾರ್ಮಿಕ ಇಲಾಖೆಗೆ ಪರಿಹಾರ ಕೋರಿ ಅರ್ಜಿಸಿ, ಅದರಲ್ಲಿ ಈರಪ್ಪನು ಸ್ವಾಭಾವಿಕಸಾವನ್ನಪ್ಪಿದ್ದಾನೆಂದು ಹೇಳಿಕೆ ನೀಡಿ ಕಾರ್ಮಿಕ ಇಲಾಖೆಯಿಂದ ಪರಿಹಾರದ ಹಣ ಪಡೆದಿದ್ದರು,ಇದನ್ನು ಮುಚ್ಚಿಟ್ಟು ಮುಗ್ಧರಾದ ಆರೋಪಿತರ ಮೇಲೆ ಕೊಲೆ ಆರೋಪ ಮಾಡಿದ್ದರು. ಈ ಬಗ್ಗೆ ಪೊಲೀಸರು ದಾಖಲಿಸಿದ್ದ ಎಲ್ಲಾಹೇಳಿಕೆಗಳನ್ನು, ಸಾಕ್ಷಿಗಳನ್ನು ಹಾಗೂ ಸಾಕ್ಷಿ ಒಂದಕ್ಕೊಂದು ವ್ಯತಿರಿಕ್ತವಾಗಿದ್ದನ್ನು ಸಹನ್ಯಾಯಾಲಯ ಗಮನಿಸಿ ಆರೋಪಿತರಿಗೆ ಖುಲಾಸೆ ಮಾಡಿ ತೀರ್ಪು ನೀಡಿತು.ಮೂರನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶ ಚನ್ನಪ್ಪಗೌಡ ಅವರು ಶನಿವಾರ ತೀರ್ಪುಪ್ರಕಟಿಸಿದರು.ಹಿರಿಯ ನ್ಯಾಯವಾದಿ ಮಲ್ಲಿಕಾರ್ಜುನ ಭೃಂಗಿಮಠ ಹಾಗೂ ರಾಜು ಹಿರೇಮಠ ವಕಾಲತ್ತು ವಹಿಸಿ ನ್ಯಾಯಾಲಯಕ್ಕೆ ಸತ್ಯವನ್ನು ಮನದಟ್ಟು ಮಾಡಿದ್ದು ಆರೋಪಿತರಿಗೆ ನ್ಯಾಯ ಸಿಕ್ಕಂತಾಗಿದೆ

# ಕನ್ನಡ ನಾಡು ನುಡಿ ಹೋರಾಟಕ್ಕೆ ಜಯ ಕರ್ನಾಟಕ ಸಂಘಟನೆ ಸದಾ ಸಿದ್ದ : ಆಕಾಶ ನಂದಗಾಂವ

**ಕಾಗವಾಡ : ಮಾ.30:**ಕನ್ನಡ ನಾಡು ನುಡಿಗೆ ಸಂಬಂಧಿಸಿದ ಯಾವುದೇ ಸಮಸ್ಯೆ ಹಾಗೂ ಅಡಚಣೆಗಳನ್ನು ನಿವಾರಿಸಲು ನಮ್ಮ ಸಂಘಟನೆ ಸದಾ ಸಿದ್ದವಾಗಿರುತ್ತೆ, ಆ ನಿಟ್ಟಿನಲ್ಲಿ ಕೆಲಸ ನಿರ್ವಹಿಸಲು ಇಂದು ಕೆಂಪವಾಡ ಗ್ರಾಮದಲ್ಲಿ 34 ನೇಯ ಗ್ರಾಮ ಘಟಕ ಉದ್ಘಾಟನೆ ಮಾಡಿದ್ದೇವೆ ಎಂದು ಜಯ ಕರ್ನಾಟಕ ಸಂಘಟನೆ ತಾಲೂಕಾಧ್ಯಕ್ಷ ಆಕಾಶ ನಂದಗಾಂವ ಅವರು ಹೇಳಿದರು.

ಅವರು ಕಾಗವಾಡ ತಾಲೂಕಿನ ಕೆಂಪವಾಡ ಗ್ರಾಮದಲ್ಲಿ 34 ನೇಯ ಗ್ರಾಮ ಘಟಕ ಶಾಖೆಯನ್ನು ಉದ್ಘಾಟಿಸಿ ಮಾತನಾಡುತ್ತಿದ್ದರು. ಗಡಿ ಭಾಗದಲ್ಲಿ ಕನ್ನಡಿಗರ ಸಮಸ್ಯೆ ಬಗೆಹರಿಸುವ ಉದ್ದೇಶದ ಜೊತೆಗೆ ಕನ್ನಡವನ್ನು ಸದೃಢವಾಗಿ ಪಸರಿಸುವ ಕಾಯಕವನ್ನು ನಮ್ಮ ಸಂಘಟನೆಯ ಪದಾಧಿಕಾರಿಗಳು ಮಾಡುತ್ತಿದ್ದಾರೆ ಎಂದರು.

ಅನಂತರ ಮುಖಂಡ ಸಂತೋಷ ಬಡಕಂಬಿ ಮಾತನಾಡಿ ಶೀಘ್ರವೇ ತಾಲೂಕಾ ಮಟ್ಟದಲ್ಲಿ ದೊಡ್ಡ ಉತ್ಸವ ಮಾಡಿ ಸಂಘಟನೆಯನ್ನು ಬಲಪಡಿಸೋಣ ಎಂದರು.

ಅನಂತರ ವಿನೋದ ಕಾಂಬಳೆ, ವಿಜಯ ಬೀಸೆ, ಪ್ರಶಾಂತ ಚೌಗಲಾ, ಸಂಜಯ ವಾಘಮೋಡೆ ಅವರು ಮಾತನಾಡಿದರು. ಈ ವೇಳೆ ಕೆಂಪವಾಡ ಗ್ರಾಮ ಘಟಕದ ಅಧ್ಯಕ್ಷರನ್ನಾಗಿ ಸಚಿನ ಹೆರವಾಡೆ, ಉಪಾಧ್ಯಕ್ಷರನ್ನಾಗಿ ಕರೆಪ್ಪ ಹಟ್ಟಿಮನಿ ಅವರನ್ನು ನೇಮಕ ಮಾಡಲಾಯಿತು.



ಈ ವೇಳೆ ವಿನಾಯಕ ಘಾಳಿ, ರಾಜು ಸೆಮಡೆ, ಬಾಳು ನಾಯಿಕ, ಅಮಸಿದ್ದ ತಪಲೆ, ಬಸಪ್ಪ ಹೇರವಾಡ, ವಿಕಾಸ ಮೋರೆ, ಸಾಗರ ಗಲಗಲಿ, ಅರುಣ ತಪಲೆ, ಪಿಂಟು ಘಾಳಿ, ರಮಜಾನ ಇನಾಮದಾರ, ಸುನೀಲ ಹೇರವಾಡೆ, ಉಮೇಶ ಕೋಳಿ ಸೇರಿದಂತೆ ಇತರರಿದ್ದರು.

# ನಗನೂರ ಸಮೀಪ ದಾರುಣ ಘಟನೆ: ಕೃಷಿ ಹೊಂಡದಲ್ಲಿ ಮುಳುಗಿ ನಾಲ್ವರು ಮಕ್ಕಳು ಸಾವಿಗೆ ತುತ್ತು



**ಯಾದಗಿರಿ :** ನಗನೂರ ಗ್ರಾಮದ ಸಮೀಪ ಭಾನುವಾರ ಸಂಭವಿಸಿದ ದಾರುಣ ಘಟನೆಯಲ್ಲಿ ನಾಲ್ವರು ಅಪ್ರಾಪ್ತ ಮಕ್ಕಳು ಕೃಷಿ ಹೊಂಡದಲ್ಲಿ ಮುಳುಗಿ ಸಾವನ್ನಪ್ಪಿರುವುದು ಗ್ರಾಮಸ್ಥರನ್ನು ಶೋಕಸಾಗರದಲ್ಲಿ ಮುಳುಗಿಸಿದೆ.

ಗ್ರಾಮದಿಂದ ಸುಮಾರು 3–4 ಕಿಲೋಮೀಟರ್ ದೂರದಲ್ಲಿರುವ ಭೀಮಣ್ಣ ಗೌಡಗೇರಿ ಅವರ ಹೊಲದಲ್ಲಿರುವ ಕೃಷಿ ಹೊಂಡದಲ್ಲಿ ಈ ದುರ್ಘಟನೆ ನಡೆದಿದೆ. ಈಜಾಡಲು ಹೋಗಿದ್ದ ವೇಳೆ ಆಳವಾದ ನೀರಿನಲ್ಲಿ ಮುಳುಗಿ ಮಕ್ಕಳು ಪ್ರಾಣ ಕಳೆದುಕೊಂಡಿದ್ದಾರೆ ಎಂದು ತಿಳಿದು ಬಂದಿದೆ.

ಮೃತರಾದ ಮಕ್ಕಳ ವಿವರ ಹೀಗಿದೆ:

ಬಸಮ್ಮ (ಹೆಣ್ಣುಮಗಳು), ತಂದೆ ಬಸವರಾಜ್ ಕಾಡಮಗೇರಿ

ಶರತ್ (06 ವರ್ಷ), ತಂದೆ ರಾಜಪ್ಪ ಕಾಡಮಗೇರಿ

ಹನುಮೇಶ್ (08 ವರ್ಷ), ತಂದೆ ರಾಜಪ್ಪ ಕಾಡಮಗೇರಿ

ಕಿರಣ್ (06 ವರ್ಷ), ತಂದೆ ಮಲ್ಲಿಕಾರ್ಜುನ ಅಂಬರಗೊಂಡ

ಘಟನೆಯ ವಿಷಯ ತಿಳಿದ ತಕ್ಷಣ ಸ್ಥಳಕ್ಕೆ ಗ್ರಾಮಸ್ಥರು ದೌಡಾಯಿಸಿ ಮಕ್ಕಳನ್ನು ರಕ್ಷಿಸಲು ಪ್ರಯತ್ನಿಸಿದರೂ, ಅಷ್ಟರಲ್ಲಿ ಅವರು ಸಾವನ್ನಪ್ಪಿದ್ದರು ಎಂದು ತಿಳಿದುಬಂದಿದೆ.

ಈ ಘಟನೆ ಸಂಬಂಧ ಕೆಂಭಾವಿ ಪೊಲೀಸ್ ಠಾಣೆಯಲ್ಲಿ ಇನ್ನೂ ಪ್ರಕರಣ ದಾಖಲಾಗಿಲ್ಲ. ಪ್ರಕರಣ ದಾಖಲಾದ ನಂತರ ಹೆಚ್ಚಿನ ಮಾಹಿತಿ ಲಭ್ಯವಾಗಲಿದೆ ಎಂದು ಮೂಲಗಳು ತಿಳಿಸಿವೆ.

# ಪ್ರಾಮಾಣಿಕ ಶ್ರಮದ ಸೇವೆಯೇ ಯಸಸ್ಸಿನ ಗುಟ್ಟು : ನ್ಯಾಯವಾದಿ ಭೃಂಗಿಮಠ



**ಕಲಬುರಗಿ,ಮಾ.30**–ಪ್ರಾಮಾಣಿಕತೆಯಿಂದ ಸತತ ಶ್ರಮವಹಿಸಿದರೆ ಯಸಸ್ಸು ಸಿಗುತ್ತದೆ ಎಂದು ಹಿರಿಯ ನ್ಯಾಯವಾದಿ ಮಲ್ಲಿಕಾರ್ಜುನ ಭೃಂಗಿಮಠ ಹೇಳಿದರು.

ಅವರು ನಗರದ ಸುಲ್ತಾನಪುರ ಮಹಾಲಕ್ಷ್ಮಿ ಮಂದಿರ ಹತ್ತಿರದ ವಿಜಯ ನಗರದಲ್ಲಿ ಅಭಿಮಾನಿ ಬಳಗವು ಹಮ್ಮಿಕೊಂಡಿದ್ದ ಸನ್ಮಾನ ಸ್ವೀಕರಿಸಿ ಮಾತನಾಡಿದರು. ಜೀವನದಲ್ಲಿ ಪ್ರಮಾಣಿಕತೆ,ಸತ್ಯ ಮತ್ತು ಮೌಲ್ಯಯುತ ತತ್ವಗಳಿಗೆ ಪ್ರತಿಯೊಬ್ಬರು ಶ್ರಮಿಸಬೇಕು ಇಲ್ಲವಾದರೆ ಸತ್ಯ ನಾಶವಾಗಿ ಸಮಾಜ ಅಧೋಗತಿಗೆ ಹೋಗುತ್ತದೆ ಎಂದು ಎಚ್ಚರಿಸಿದ ಭೃಂಗಿಮಠ ಅವರು ಪ್ರಜಾಪ್ರಭುತ್ವದ ಮೂಲ ತತ್ವವೇ ಪ್ರಮಾಣಿಕತೆ ಈ ಹಾದಿಯಲ್ಲೇ ಪ್ರತಿಯೊಬ್ಬರು ಸಾಗಬೇಕು ಆಗ ಮೌಲ್ಯಗಳ ರಕ್ಷಣೆ ಆಗುತ್ತವೆ ಎಂದರು.

ಯಾರು ಕಾನೂನು ಪಾಲಿಸುವರೋ ಅವರಿಗೆ ಕಾನೂನು ರಕ್ಷಣೆ ನೀಡುತ್ತದೆ , ಇತ್ತೀಚಿನ ದಿನಗಳಲ್ಲಿ ಸಮಾಜದಲ್ಲಿ ಸತ್ಯವಂತರ ಮೇಲೆ ಬರಿ ಸುಳ್ಳು ಕೇಸು ಹಾಕುತ್ತಿರುವುದು ಕಂಡು ಬರುತ್ತಿದ್ದು ಇದು ಉತ್ತಮ ಬೆಳವಣಿಗೆ ಅಲ್ಲ, ಸುಳ್ಳು ವಿಜೃಂಭಿಸಿದರೆ ಸತ್ಯಕ್ಕೆ ಕೊಡಲೆ ಪೆಟ್ಟು ಬೀಳುತ್ತದೆ ಎಂದು ತಿಳಿಸಿದರು.ಯುವ ಹೋರಾಟಗಾರ ಶ್ರೀಧರ ಪಾಟೀಲ ಮಾತನಾಡಿ ಸತ್ಯಮೇವ ಜಯತೆ ಮಂತ್ರ ಪಠಿಸಿ ಸತ್ಯವಾದಿಗಳಾಗಿ ಬಾಳಲು ಪ್ರತಿಯೊಬ್ಬರು ಪ್ರಯತ್ನಿಸಬೇಕು ಅಂದಾಗ ಮಾತ್ರ ಸಮಾಜದ ಉತ್ತಮ ಸ್ವಾಸ್ಥ್ಯ ಕಾಪಾಡಲು ಸಾಧ್ಯವಾಗುತ್ತದೆ ಎಂದರು.ಯುವ ಹೋರಾಟಗಾರ ನ್ಯಾಯವಾದಿ ರಾಜು ಹಿರೇಮಠ ಅವರು ಮಾತನಾಡಿ ಗುರು ಹಿರಿಯರು ಹಾಕಿಕೊಟ್ಟ ಉತ್ತಮ ಮಾರ್ಗದಲ್ಲಿ ಎಲ್ಲರೂ ಸಾಗಬೇಕು, ಅನ್ಯಾಯದ ವಿರುದ್ಧ ಧೈರ್ಯದಿಂದ ಹೋರಾಡುವ ಯುವಕರ ಪಡೆ ಇಂದಿನ ದಿನಮಾನಗಳಲ್ಲಿ ಕಟ್ಟಿ ಸಮಾಜ ಸುಧಾರಣೆ ಮಾಡುವುದು ಅಗತ್ಯವಾಗಿದೆ, ಎಂದ ಅವರು ನ್ಯಾಯವನ್ನು ಕಾಪಾಡಲು ಸತತ ಪ್ರಯತ್ನ ಮಾಡುವೆ, ಕಷ್ಟವೇ ಇರಲಿ ಸುಖಃವೆ ಬರಲಿ ನ್ಯಾಯುತವಾದ ಸಮಾಜನಿರ್ಮಾಣಕ್ಕಾಗಿ ಪ್ರಯತ್ನಿಸಿ, ಭರತ ಭೂಮಿಯನ್ನು ರಕ್ಷಿಸಿವೆ ಎಂದರು, ಹಿರಿಯರಾದ ವಿಜಯಾದೇವಿ ಪಾಟೀಲ, ಹಾಗೂ ಶರಣಗೌಡ ಪಾಟೀಲ, ಅಂಬಾರಾಯ ಧರಿ, ಮಾಹಾದೇವ ಗಣಜಲಖೇಡ್, ಮಲ್ಲು ಗಣಜಲಖೇಡ ಇತರರು ಉಪಸ್ಥಿತರಿದ್ದರು.

# ನಶಾ ಮುಕ್ತ ಭಾರತ ಅಭಿಯಾನ' ಅಂಗವಾಗಿ ಭವ್ಯ ಅಭಿನಂದನಾ ಸಮಾರಂಭ



**ಬೀದರ್:ಮಾ.30:**ಪ್ರಜಾಪಿತಾ ಬ್ರಹ್ಮಾಕುಮಾರಿಸ್ ಈಶ್ವರೀಯ ವಿಶ್ವವಿದ್ಯಾಲಯದ ಪಾವನಧಾಮ ಬೀದರ್ ವತಿಯಿಂದ 'ನಶಾ ಮುಕ್ತ ಭಾರತ ಅಭಿಯಾನ' ಯಶಸ್ವಿಯಾಗಿ ಪೂರ್ಣಗೊಂಡ ಹಿನ್ನೆಲೆಯಲ್ಲಿ ಭವ್ಯ ಅಭಿನಂದನಾ ಸಮಾರಂಭವನ್ನು ನಗರದ ಪಾಪನಾಶ ಗೇಟ್‌ನ ಸಾಯಿ ರಾಮ ಸಮರ್ಥ ಫಂಕ್ಷನ್ ಹಾಲ್‌ನಲ್ಲಿ ಆಯೋಜಿಸಲಾಯಿತು. ಸಮಾಜದಲ್ಲಿ ನಶೆ ವಿರೋಧಿ ಜಾಗೃತಿ ಮೂಡಿಸುವ ಹಾಗೂ ವ್ಯಸನಮುಕ್ತ ಜೀವನಕ್ಕೆ ಪ್ರೇರಣೆ ನೀಡುವ ಉದ್ದೇಶದಿಂದ ಈ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು.

ಕಾರ್ಯಕ್ರಮಕ್ಕೆ ಬ್ರಹ್ಮಾಕುಮಾರಿಸ್ ಪಾವನಧಾಮ ಸಂಸ್ಥೆಯ ಜಿಲ್ಲಾ ಮುಖ್ಯಸ್ಥರಾದ ರಾಜಯೋಗಿನಿ ಬಿ.ಕೆ ಪ್ರತಿಮಾ ಬಹನ್‌ಜಿ ದಿವ್ಯ ಸಾನ್ನಿಧ್ಯ ವಹಿಸಿ, ಆತ್ಮಶಕ್ತಿ ಹಾಗೂ ಮನೋಬಲದ ಮೂಲಕ ವ್ಯಸನದಿಂದ ದೂರವಿರುವ ಮಹತ್ವವನ್ನು ವಿವರಿಸಿದರು. ಕಾರ್ಯಕ್ರಮವು ನಶಾಮುಕ್ತಿ ಪ್ರತಿಜ್ಞಾ ವಿಧಿ ಸ್ವೀಕಾರದ ಮೂಲಕ ಭಕ್ತಿಭಾವದಿಂದ ಆರಂಭಗೊಂಡಿತು.

ಪೌರಾಡಳಿತ ಮತ್ತು ಹಜ್ ಸಚಿವ ರಹೀಮ್ ಖಾನ್ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿ, ನಶೆ ಇಂದಿನ ಸಮಾಜಕ್ಕೆ ಗಂಭೀರ ಸವಾಲಾಗಿದ್ದು, ಅದು ವ್ಯಕ್ತಿಯ ಬದುಕಿನಷ್ಟೇ ಅಲ್ಲದೆ ಕುಟುಂಬ ಹಾಗೂ ಸಮಾಜದ ಮೇಲೂ ದುಷ್ಪರಿಣಾಮ ಬೀರುತ್ತಿದೆ ಎಂದು ಹೇಳಿದರು. ನಶೆಗೆ ಒಳಗಾದ ವ್ಯಕ್ತಿ ತನ್ನ ಜವಾಬ್ದಾರಿಗಳನ್ನು ಮರೆತು, ಕುಟುಂಬದಲ್ಲಿ ಆರ್ಥಿಕ ಸಂಕಷ್ಟ ಹಾಗೂ ಮಾನಸಿಕ ಒತ್ತಡಗಳನ್ನು ಉಂಟುಮಾಡುತ್ತಾನೆ. ವಿಶೇಷವಾಗಿ ಗ್ರಾಮೀಣ ಪ್ರದೇಶಗಳಲ್ಲಿ ಇದರ ಪರಿಣಾಮ ಇನ್ನಷ್ಟು ಗಂಭೀರವಾಗಿದ್ದು, ಯುವಜನತೆ ತಪ್ಪು ದಾರಿಗೆ ಹೋಗುವ ಅಪಾಯ ಹೆಚ್ಚುತ್ತಿದೆ ಎಂದು ಅವರು ಎಚ್ಚರಿಸಿದರು. ಆರೋಗ್ಯಕರ ಜೀವನಶೈಲಿಯನ್ನು ಅಳವಡಿಸಿಕೊಂಡು ನಶೆಯಿಂದ ದೂರವಿರುವುದು ಪ್ರತಿಯೊಬ್ಬರ ಕರ್ತವ್ಯವಾಗಿದೆ ಎಂದು ಹೇಳಿದರು.

ಮುಖ್ಯ ಭಾಷಣಕಾರರಾಗಿ ಬ್ರಹ್ಮಾಕುಮಾರಿಸ್ ಪ್ರಧಾನ ಕೇಂದ್ರ ಮೌಂಟ್ ಅಬು ವೈದ್ಯಕೀಯ ವಿಭಾಗದ ಅಧ್ಯಕ್ಷರು ಹಾಗೂ ಅಭಿಯಾನದ ನಿರ್ದೇಶಕರಾದ ರಾಜಯೋಗಿ ಡಾ. ಬನಾರಸಿಲಾಲ್ ಶಾ ಮಾತನಾಡಿ, 'ನಶಾ ಮುಕ್ತ ಭಾರತ ಅಭಿಯಾನ'ವು ದೇಶದಾದ್ಯಂತ ವ್ಯಾಪಕವಾಗಿ ಹರಡಿದ್ದು, ಈಗಾಗಲೇ ಸುಮಾರು 4 ಕೋಟಿಗೂ ಹೆಚ್ಚು ಜನರಿಗೆ ತಲುಪಿದೆ ಎಂದು ತಿಳಿಸಿದರು. ಕೇಂದ್ರ ಗೃಹ ಸಚಿವಾಲಯಕ್ಕೆ ಸಂಬಂಧಿಸಿದ ನಾರ್ಕೋಟಿಕ್ ಇಲಾಖೆಯ ನಿರ್ದೇಶಕರಿಗೂ ಈ ಅಭಿಯಾನದ ಮಾಹಿತಿ ತಲುಪಿದ್ದು, ಅವರು ಸಹ ಈ ಕಾರ್ಯಕ್ರಮದಲ್ಲಿ ಭಾಗಿಯಾಗಲು ಆಸಕ್ತಿ ವ್ಯಕ್ತಪಡಿಸಿರುವುದು ಈ ಅಭಿಯಾನದ ಮಹತ್ವವನ್ನು ಸೂಚಿಸುತ್ತದೆ ಎಂದು ಹೇಳಿದರು.

ಪ್ರತಿದಿನ ಸುಮಾರು 5,500ಕ್ಕೂ ಹೆಚ್ಚು ಯುವಕರು ವ್ಯಸನದ ಅಡಕಿಗೆ ಸಿಲುಕುತ್ತಿರುವುದು ಆತಂಕಕಾರಿ ಬೆಳವಣಿಗೆಯಾಗಿದೆ ಎಂದು ಅವರು ವಿಷಾದಿಸಿದರು. ಭಾರತವು ಯುವಕರ ದೇಶವಾಗಿದ್ದು, ಸುಮಾರು 65 ಶೇಕಡಾ ಜನಸಂಖ್ಯೆ ಯುವಕರೇ ಆಗಿದ್ದಾರೆ. ಆದ್ದರಿಂದ ಯುವಜನತೆಯನ್ನು ನಶೆಯಿಂದ ದೂರವಿಡುವುದು ಅತ್ಯಂತ ಅಗತ್ಯವಾಗಿದೆ ಎಂದು ಹೇಳಿದರು.

ಈ ಹಿನ್ನೆಲೆಯಲ್ಲಿ ದೇಶದ 28 ರಾಜ್ಯಗಳಲ್ಲಿ ನಶಾಮುಕ್ತಿ ಜಾಗೃತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದ್ದು, ಸ್ವಾತಂತ್ರ ಹೋರಾಟದಂತೆಯೇ ಸಮೂಹ ಸಹಕಾರದಿಂದ ಮಾತ್ರ ನಶಾಮುಕ್ತ ಸಮಾಜ ನಿರ್ಮಾಣ ಸಾಧ್ಯವೆಂದು ಅವರು ಅಭಿಪ್ರಾಯಪಟ್ಟರು. ಭಾರತ ದೇಶದ ಜೊತೆಗೆ ಕರ್ನಾಟಕ ಹಾಗೂ ಬೀದರ್ ಜಿಲ್ಲೆಯನ್ನು ಸಂಪೂರ್ಣ ನಶಾಮುಕ್ತಗೊಳಿಸುವ ಸಂಕಲ್ಪವನ್ನು ವ್ಯಕ್ತಪಡಿಸಿ, ಜನರು ಸಕ್ರಿಯವಾಗಿ ಭಾಗವಹಿಸಲು ಕರೆ ನೀಡಿದರು.

ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಪಶುವೈದ್ಯಕೀಯ ಮತ್ತು ಮೀನುಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯದ ಡಾ. ಶಿವಪ್ರಕಾಶ, ಬೀದರ ವಿಶ್ವವಿದ್ಯಾಲಯದ ವಿಶೇಷಾಧಿಕಾರಿ ರವೀಂದ್ರ ಗಬಾಡೆ ಭಾಗವಹಿಸಿದ್ದರು. ಗೌರವ ಅತಿಥಿಗಳಾಗಿ ಜ್ಞಾನಸುಧಾ ಶಿಕ್ಷಣ ಸಂಸ್ಥೆಯ ಅಧ್ಯಕ್ಷೆ ಡಾ. ಪೂರ್ಣಿಮಾ ಜಾರ್ಜ್ ಹಾಗೂ ಎಚ್‌ಕೆಇ ಸಂಸ್ಥೆಯ ಆಡಳಿತ ಮಂಡಳಿ ಸದಸ್ಯ ಡಾ. ರಾಜನೀಶ ಎಸ್ ವಾಲಿ, ಡಾ. ಬಸವರಾಜ ಜಿ. ಪಾಟೀಲ್, ಡಾ. ರಾಜಶೇಖರ್ ಸೇಡಂಕರ್ ಉಪಸ್ಥಿತರಿದ್ದರು.

ಈ ಸಂದರ್ಭದಲ್ಲಿ ಜಿಲ್ಲೆಯ ವಿವಿಧ ಭಾಗಗಳಿಂದ ವ್ಯಸನಮುಕ್ತರಾಗಿರುವ 150ಕ್ಕೂ ಹೆಚ್ಚು ಮಂದಿಯನ್ನು ಗೌರವ ಸನ್ಮಾನ ಮಾಡಿ ಅಭಿನಂದಿಸಲಾಯಿತು. ಅವರ ಜೀವನದಲ್ಲಿ ಸಂಭವಿಸಿದ ಸಕಾರಾತ್ಮಕ ಬದಲಾವಣೆಗಳನ್ನು ವೇದಿಕೆಯಲ್ಲಿ ಹಂಚಿಕೊಳ್ಳುವ ಮೂಲಕ ಇತರರಿಗೆ ಪ್ರೇರಣೆಯಾಯಿತು.

ಕಾರ್ಯಕ್ರಮದಲ್ಲಿ ಬಿ.ಕೆ ಗುರುದೇವಿ ಬಹೆನಜಿ ಅತಿಥಿಗಳನ್ನು ಸ್ವಾಗತಿಸಿ, ಬಿ.ಕೆ ರಾಧಾ ಬಹೆನಜಿ ಕಾರ್ಯಕ್ರಮ ನಿರೂಪಿಸಿದರು. ವೇದಿಕೆಯಲ್ಲಿ ಬಿ.ಕೆ ಸುಮನ್ ಬಹೆನಜಿ, ಬಿ.ಕೆ ಉಷಾ ಬಹೆನಜಿ , ಬಿ.ಕೆ ಮಂದಾ ಬಹೆನಜಿ ಸೇರಿದಂತೆ ವಿವಿಧ ಸೇವಾ ಕೇಂದ್ರಗಳಿಂದ ಬಂದ ಬ್ರಹ್ಮಾಕುಮಾರಿ ಸಹೋದರರು ಹಾಗೂ ಸಹೋದರಿಯರು ಉಪಸ್ಥಿತರಿದ್ದರು.

# ಬೆಂಗಳೂರು ಕರಗಕ್ಕೆ ಸಕಲ ಸಿದ್ಧತೆ



**ಬೆಂಗಳೂರು, ಮಾ. 30–** ಬೆಂಗಳೂರು ಕರಗ ಏಪ್ರಿಲ್ 1 ರಂದು ನಡೆಯಲಿದ್ದು, ಇದಕ್ಕೆ ಎಲ್ಲ ಸಿದ್ಧತೆಗಳು ನಡೆದಿವೆ. ಮುಖ್ಯಮಂತ್ರಿ ಮತ್ತು ಉಪಮುಖ್ಯಮಂತ್ರಿ ಇಬ್ಬರಿಗೂ ಕರಗದಲ್ಲಿ ಭಾಗಿಯಾಗುವಂತೆ ಆಹ್ವಾನ ನೀಡಲಾಗಿದೆ ಎಂದು ಸಾರಿಗೆ ಮತ್ತು ಮುಜರಾಯಿ ಸಚಿವ ರಾಮಲಿಂಗಾರೆಡ್ಡಿ ಹೇಳಿದರು.ಬೆಂಗಳೂರಿನಲ್ಲಿಂದು ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಈ ಬಾರಿಯ ಕರಗವನ್ನು ಹೆಚ್ಚು ಆಕರ್ಷಕವಾಗಿ ಹಾಗೂ ಯಾವುದೇ ತೊಂದರೆಗಳಾಗದಂತೆ ಮಾಡಲು ಕ್ರಮ ವಹಿಸಿದ್ದೇವೆ. ಕರಗ ಅಂಗವಾಗಿ ಬೆಂಗಲೂರು ನಗರದ ಪ್ರಮುಖ ಹಾಗೂ ಐತಿಹಾಸಿಕ ಮಂದಿರ ಮತ್ತು ಕಟ್ಟಡಗಳಿಗೆ ವಿಧ ವಿಧವಾದ ದೀಪಾಲಂಕಾರ ಮಾಡಲಾಗಿದೆ ಎಂದರಬೆಂಗಳೂರು ಕರಗವನ್ನು ರಾಜ್ಯದಷ್ಟೇ ಅಲ್ಲದೆ ಬೇರೆ ಜಿಲ್ಲೆಯವರು ನೋಡುವಂತೆ ವ್ಯವಸ್ಥೆ ಮಾಡಿದ್ದೇವೆ. ಸಂಚಾರ ದಟ್ಟಣೆಯಾಗದಂತೆಯೂ ಕ್ರಮ ವಹಿಸಲಾಗಿದೆ. 24 ಗಂಟೆಯೂ ಕಸ ವಿಲೇವಾರಿಗೆ ಸೂಚನೆ ನೀಡಿದ್ದೇನೆ ಎಂದು ಹೇಳಿದರು.ಬಸವಗುಡಿಯ ಕಡಲೆಕಾಯಿ ಪರಿಷೆಯನ್ನು ಐದು ದಿನಗಳು ಮಾಡಿದ್ದೇವು. ವ್ಯಾಪಕ ಪ್ರಚಾರ ಕೊಟ್ಟಿದ್ದೇವು.. ಕಡಲೆಕಾಯಿ ಪರಿಷೆಗೆ ಸುಮಾರು 15 ಲಕ್ಷ ಜನ ಬಂದಿದ್ದರು. ಬೆಂಗಳೂರು ಕರಗಕ್ಕೂ ಹೆಚ್ಚಿನ ಜನ ಬರುವಂತೆ ಎಲ್ಲ ರೀತಿಯ ವ್ಯಾಪಕ ಸಿದ್ಧತೆಗಳನ್ನು ಮಾಡಲಾಗಿದೆ. ಕರಗಕ್ಕೆ 900 ವರ್ಷಗಳ ಇತಿಹಾಸವಿದೆ ಎಂದರು.

ಪಾಲಿಕೆ ಬಜೆಟ್‌ನಲ್ಲಿ ಸರ್ಕಾರದ ಮೇಲೆ ಹೆಚ್ಚಿನ ಅವಲಂಬನೆ ಇದೆ ಎಂಬ ಬಗ್ಗೆ ಪ್ರತಿಕ್ರಿಯಿಸಿದ ಅವರು, ಇದು ಮೊದಲಿನಿಂದಲೂ ಹಾಗೆಯೇ ಇದೆ. ಪಾಲಿಕೆಗಳಿಗೆ ಕಡಿಮೆಯಾಗುವ ಹಣವನ್ನು ಸರ್ಕಾರ ಭರಿಸುತ್ತದೆ ಎಂದು ಹೇಳಿದರು.ಮುಸ್ಲಿಂ ಸಮುದಾಯದವರನ್ನು ಬಿಜೆಪಿ ಸರಿಯಾಗಿ ನಡೆಸಿಕೊಳ್ಳುತ್ತಿಲ್ಲ. ಕಾಂಗ್ರೆಸ್ ಪಕ್ಷ ಮುಂದಿನ ದಿನಗಳಲ್ಲಿ ಮುಸ್ಲಿಂ ಸಮುದಾಯದವರಿಗೆ ರಾಜ್ಯಸಭೆ ಮತ್ತು ವಿಧಾನಪರಿಷತ್ ಸ್ಥಾನ ಕೊಡುತ್ತದೆ ಎಂದು ಹೇಳಿದರು.ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ಬಸ್‌ಗಳಿಗೆ ಸದ್ಯ ಯಾವುದೇ ಡಿಸೇಲ್ ಸಮಸ್ಯೆ ಆಗಿಲ್ಲ. ಯುದ್ಧ ಹೀಗೆ ಮುಂದುವರೆದರೆ ಮುಂದೆ ಏನಾದರೂ ಸಮಸ್ಯೆ ಆಗಬಹುದೇನೋ, ತಕ್ಷಣಕ್ಕೆ ಯಾವುದೇ ಸಮಸ್ಯೆ ಇಲ್ಲ ಎಂದು ಅವರು ಹೇಳಿದರು.

# ಖೇಳಗಿ( ಬಿ )ಜಗದ್ಗುರು ಶಿವಲಿಂಗೇಶ್ವರ ಜಾತ್ರಾ ಮಹೋತ್ಸವ



**ಬಸವಕಲ್ಯಾಣ :ಮಾ.30:** ಬೀದರ್ ಜಿಲ್ಲೆಯ ಬಸವಕಲ್ಯಾಣ ತಾಲೂಕಿನ ಖೇಳಗಿ (ಬಿ) ಗ್ರಾಮದ ಜಗದ್ಗುರು ಶಿವಲಿಂಗೇಶ್ವರ ವಿರಕ್ತ ಮಠದಲ್ಲಿ 98ನೇ ಜಾತ್ರಾ ಮಹೋತ್ಸವವನ್ನು ಭಕ್ತಿಭಾವದಿಂದ ಶ್ರದ್ಧಾಪೂರ್ವಕವಾಗಿ ವಿಜೃಂಭಣೆಯಿಂದ ಆಚರಿಸಲಾಯಿತು.ಈ ಸಂದರ್ಭದಲ್ಲಿ ಶಿಕ್ಷಣ ಕ್ಷೇತ್ರದಲ್ಲಿ ನೀಡಿದ ಮಹತ್ವದ ಸೇವೆಯನ್ನು ಪರಿಗಣಿಸಿ ಡಾ. ಸತೀಶ್ ಕುಮಾರ್ ಹೊಸಮನಿ ಅವರಿಗೆ "ಶಿಕ್ಷಣ ಸೇವಾ ರತ್ನ" ಪ್ರಶಸ್ತಿಯನ್ನು ನೀಡಿ ಶ್ರೀಮಠದ ವತಿಯಿಂದ ಗೌರವಿಸಲಾಯಿತು.

ಡಾ. ಸತೀಶ್ ಕುಮಾರ್ ಹೊಸಮನಿ ಅವರು ತಮ್ಮ ಗ್ರಾಮದಲ್ಲಿ ಜನಿಸಿ ಶಿಕ್ಷಣ ಕ್ಷೇತ್ರದಲ್ಲಿ ಉನ್ನತ ಸ್ಥಾನಕ್ಕೇರಿದ್ದು, ಗ್ರಂಥಾಲಯ ಸೇವೆಯಲ್ಲಿ ತಮ್ಮದೇ ಆದ ಛಾಪು ಮೂಡಿಸಿದ್ದಾರೆ. ಡಿಜಿಟಲ್ ಗ್ರಂಥಾಲಯ ವ್ಯವಸ್ಥೆಯನ್ನು ಪರಿಚಯಿಸುವ ಮೂಲಕ ಸಾರ್ವಜನಿಕರು ತಮ್ಮ ಮೊಬೈಲ್‌ಗಳಲ್ಲಿ ಪುಸ್ತಕಗಳನ್ನು ಓದುವಂತೆ ಹೊಸ ಕ್ರಾಂತಿಯನ್ನು ಆರಂಭಿಸಿದ್ದಾರೆ. ಪ್ರಸ್ತುತ ಶಿಕ್ಷಣ ಇಲಾಖೆಯಲ್ಲಿ ನಿರ್ದೇಶಕರಾಗಿ ಕಾರ್ಯನಿರ್ವಹಿಸುತ್ತಿದ್ದು, ಮಕ್ಕಳ ಉತ್ತಮ ಶಿಕ್ಷಣಕ್ಕಾಗಿ ವಿವಿಧ ಯೋಜನೆಗಳನ್ನು ರೂಪಿಸಿ ಸಮರ್ಪಕವಾಗಿ ಜಾರಿಗೆ ತರುತ್ತಿದ್ದಾರೆ. ಅವರ ಸೇವೆಯನ್ನು ಗುರುತಿಸಿ ಶ್ರೀಮಠದಿಂದ ಪ್ರಶಸ್ತಿ ನೀಡಿ ಸನ್ಮಾನಿಸಲಾಗಿದೆ. ಎಂದು ಶ್ರೀ ಮಠದ ಪೀಠಾಧಿಪತಿಗಳಾದ ಪೂಜ್ಯ ಶ್ರೀ ಮ.ನಿ.ಪ್ರ.ಶಿವಲಿಂಗ ಮಹಾಸ್ವಾಮಿಗಳು ಹೇಳಿದ್ದಾರೆ.ಶಾಲಾ ಶಿಕ್ಷಣ ಇಲಾಖೆಯ ನಿರ್ದೇಶಕ ಡಾ. ಸತೀಶ್ ಕುಮಾರ್ ಹೊಸಮನಿ ಮಾತನಾಡಿ, ಜಗದ್ಗುರು ಶಿವಲಿಂಗೇಶ್ವರ ವಿರಕ್ತ ಮಠವು ಜಾತಿ–ಮತ ಭೇದಗಳನ್ನು ಮರೆತು 12ನೇ ಶತಮಾನದ ಶರಣರ ಆಚಾರ–ವಿಚಾರಗಳನ್ನು ಅನುಸರಿಸುತ್ತಿದ್ದು, ಶಿಕ್ಷಣ ಕ್ಷೇತ್ರದಲ್ಲಿ ಮಹತ್ವದ ಕ್ರಾಂತಿಯನ್ನು ಮಾಡುತ್ತಿದೆ ಎಂದು ಹೇಳಿದರು. ಬಡ ಮತ್ತು ನಿರ್ಗತಿಕ ಮಕ್ಕಳಿಗೆ ಉಚಿತ ಶಿಕ್ಷಣದ ಯೋಜನೆಗಳನ್ನು ರೂಪಿಸಿರುವ ಶ್ರೀಗಳ ಸರಳತೆ ಮತ್ತು ಸಜ್ಜನಿಕೆ ಪ್ರಶಂಸನೀಯವಾಗಿದ್ದು, 12ನೇ ಶತಮಾನದ ಮಹಾನ್ ಚಿಂತಕ ಬಸವಣ್ಣನವರ ಕನಸುಗಳನ್ನು ಸಾಕಾರಗೊಳಿಸುವ ದಾರಿಯಲ್ಲಿ ನಡೆದುಕೊಳ್ಳುತ್ತಿದ್ದಾರೆ ಎಂದು ಅಭಿಪ್ರಾಯಪಟ್ಟರು.

ಜಾತ್ರಾ ಮಹೋತ್ಸವದ ಅಂಗವಾಗಿ 11 ದಿನಗಳ ಕಾಲ ಶರಣರ ವಿಚಾರಗಳ ಕುರಿತು ಪ್ರವಚನಗಳು ನಡೆಯಿತು. ಹಾಗೂ ಭಕ್ತರಿಂದ ಶ್ರೀಗಳ ತುಲಾಭಾರ ನಡೆಯುತ್ತಿದೆ, ಆ ಹಣವನ್ನು ಬಡ ಮಕ್ಕಳ ಶಿಕ್ಷಣಕ್ಕಾಗಿ ಬಳಸಲಾಗುವುದು ಎಂದು ಶ್ರೀಗಳು ಹೇಳಿದರು . ಕಾರ್ಯಕ್ರಮದಲ್ಲಿ ಸುತ್ತಮುತ್ತಲಿನ ಗ್ರಾಮದ ಭಕ್ತವೃಂದ ಹಾಗೂ ಗಣ್ಯರು ಅಪಾರ ಸಂಖ್ಯೆಯಲ್ಲಿ ಭಾಗವಹಿಸಿದ್ದರು.

# ರಕ್ತದಾನದಿಂದ ದೇಹ–ಮನಸ್ಸು ಆರೋಗ್ಯಯುತ : ಶರಣಗೌಡ ಪಾಟೀಲ್ ಪಾಳಾ

**ಕಲಬುರಗಿ,ಮಾ.30**–ರಕ್ತದಾನ ಮಾಡುವುದರಿಂದ ರಕ್ತದೊತ್ತಡ, ಮಧುಮೇಹದಂತಹ ಕೆಲವು ಆರೋಗ್ಯ ಸಮಸ್ಯೆಗಳು ನಿಯಂತ್ರಣಕ್ಕೆ ಬರಲು ಸಹಕಾರಿಯಾಗುವುದರ ಜೊತೆಗೆ ಮಾನಸಿಕ ತೃಪ್ತಿ ದೊರೆಯುತ್ತದೆ ಎಂದು ಪತ್ರಕರ್ತ ಶರಣಗೌಡ ಪಾಟೀಲ್ ಪಾಳಾ ಹೇಳಿದರು.ನಗರದ ಜಿಲ್ಲಾಧಿಕಾರಿಗಳ ಕಚೇರಿ ಆವರಣದಲ್ಲಿರುವ ಭಾರತೀಯ ರೆಡ್ ಕ್ರಾಸ್ ಸಂಸ್ಥೆಯ ಕಚೇರಿಯಲ್ಲಿ ಭಾರತೀಯ ರೆಡ್ ಕ್ರಾಸ್ ಸಂಸ್ಥೆ ಕಲಬುರಗಿ ಶಾಖೆ, ರಾಷ್ಟ್ರೀಯ ಅಂಧ ಒಕ್ಕೂಟ ಕರ್ನಾಟಕ ಶಾಖೆ ಹಾಗೂ ರಾಜ್ಯ ಸರ್ಕಾರಿ ಅಂಧ ನೌಕರರ ಸಂಘ ಕಲಬುರಗಿ ಇವರ ಸಹಯೋಗದಲ್ಲಿ ಆಯೋಜಿಸಿದ್ದ ರಕ್ತದಾನ ಶಿಬಿರವನ್ನು ಉದ್ಘಾಟಿಸಿ ಅವರು ಮಾತನಾಡಿದರು.ರಕ್ತದಾನ ಮನುಷ್ಯನ ದೈಹಿಕ ಮತ್ತು ಮಾನಸಿಕ ಆರೋಗ್ಯದ ಮೇಲೆ ಸಕಾರಾತ್ಮಕ ಪರಿಣಾಮ ಬೀರುತ್ತದೆ. ದೇಶದಲ್ಲಿ ಪ್ರತಿವರ್ಷ ಸುಮಾರು 41 ದಶಲಕ್ಷ ಯುನಿಟ್ ರಕ್ತದ ಕೊರತೆ ಎದುರಾಗುತ್ತಿದೆ. ಸಮಯಕ್ಕೆ ಸರಿಯಾಗಿ ರಕ್ತ ಲಭ್ಯವಾಗದ ಕಾರಣ ವಿವಿಧ ಕಾಯಿಲೆಗಳಿಂದ ಬಳಲುತ್ತಿರುವ ರೋಗಿಗಳು ಹಾಗೂ ಅಪಘಾತದಲ್ಲಿ ಗಾಯಗೊಂಡವರು ಜೀವ ಕಳೆದುಕೊಳ್ಳುವ ಪರಿಸ್ಥಿತಿ ಉಂಟಾಗುತ್ತಿದೆ. ಅಮೂಲ್ಯ ಜೀವಗಳನ್ನು ಉಳಿಸಲು ಪ್ರತಿಯೊಬ್ಬರೂ ಸ್ವಯಂಪ್ರೇರಿತವಾಗಿ ರಕ್ತದಾನ ಮಾಡಬೇಕು ಎಂದು ಕರೆ ನೀಡಿದರು.ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ರೆಡ್ ಕ್ರಾಸ್ ಸಂಸ್ಥೆಯ ಸಭಾಪತಿ ಅರುಣಕುಮಾರ ಲೋಯಾ ಮಾತನಾಡಿ, ಅಂಧರು ಸಹ ರಕ್ತದಾನದಲ್ಲಿ ಭಾಗವಹಿಸಿರುವುದು ಸಂತೋಷದ ಸಂಗತಿ. ಶಾರೀರಿಕ ಅಡಚಣೆಗಳಿದ್ದರೂ ಸಮಾಜ ಸೇವೆಯಲ್ಲಿ ಮುಂಚೂಣಿಯಲ್ಲಿರುವ ಇವರ ಕಾರ್ಯ ಶ್ಲಾಘನೀಯ ಎಂದು ಹೇಳಿದರು. ಇದೇ ಸಂದರ್ಭದಲ್ಲಿ ಕಲಬುರಗಿಯ ಜೈಕೀಶನ್ ಗಿಲ್ಡಾ ಅವರ ಅಳಿಯರಾಗಿರುವ ಹಾಗೂ ಪ್ರಥಮ ಪ್ರಯತ್ನದಲ್ಲೇ ಯುಪಿಎಸ್‌ಸಿ ಪರೀಕ್ಷೆಯಲ್ಲಿ 177ನೇ ರ್‍ಯಾಂಕ್ ಪಡೆದ ಸಾಧಕನ ಬಗ್ಗೆ ಹೆಮ್ಮೆ ವ್ಯಕ್ತಪಡಿಸಿದರು.ಕಾರ್ಯಕ್ರಮದಲ್ಲಿ ಅಂಧ ನೌಕರರಾದ ದತ್ತು ಅಗರವಾಲ್, ಶರಣಪ್ಪ ಬಿ., ಸಂಗಣ್ಣ ಬಿ.ಕೆ., ಖಂಡೆಪ್ಪ ಅವರು ಅತಿಥಿಗಳಾಗಿ ಭಾಗವಹಿಸಿದರು. ಚೆನ್ನವೀರ ಯಳಸಂಗಿ ಗೌರವ ಉಪಸ್ಥಿತಿ ವಹಿಸಿದ್ದರು. ಡಾ. ಜಗದೀಶ ಕಟ್ಟಿಮನಿ ಸೇರಿದಂತೆ ಜಿಮ್ಸ್ ಆಸ್ಪತ್ರೆಯ ಅಧಿಕಾರಿಗಳು ರಕ್ತ ಸಂಗ್ರಹಿಸಿದರು.ಅಪ್ಪಾರಾವ ಅಕ್ಕೋಣಿ ಸ್ವಾಗತಿಸಿ ಪ್ರಾಸ್ತಾವಿಕವಾಗಿ ಮಾತನಾಡಿದರು. ಕಾರ್ಯಕ್ರಮವನ್ನು ಗೌರವ ಕಾರ್ಯದರ್ಶಿ ರವೀಂದ್ರ ಶಾಬಾದಿ ನಿರೂಪಿಸಿದರು. ರಕ್ತದಾನ ಶಿಬಿರದಲ್ಲಿ ಅಂಧರು ಸಹ ಭಾಗವಹಿಸಿ ರಕ್ತದಾನ ಮಾಡುವ ಮೂಲಕ ಮಾನವೀಯತೆ ಮೆರೆದರು.

## ರಾಜ್ಯದ ಅನೇಕ ಗಣ್ಯರಿಗೆ "ಹುನುಕುಂಟೆ ಶ್ರೀ" ಪ್ರಶಸ್ತಿ ತೊಗಲುಗೊಂಬೆ ಮನುಷ್ಯ ಜೀವನದ ಒತ್ತಡಗಳನ್ನು ನಿವಾರಿಸುತ್ತದೆ



**ಬಳ್ಳಾರಿ ಮಾ.30:** ತೊಗಲುಗೊಂಬೆ ಕಲಾವಿದ ದಿ.ಶ್ರೀ ಹುಲೆಪ್ಪನವರ ಸ್ಮರಣಾರ್ಥ ರಾಜ್ಯಮಟ್ಟದ "ಹುಲಿಕುಂಟೆ ಶ್ರೀ" ಪ್ರಶಸ್ತಿ ಪ್ರಧಾನ ಸಮಾರಂಭ ನಿನ್ನೆ ಸಂಜೆ ನಗರದ ಡಾ. ಜೋಳದರಾಶಿ ದೊಡ್ಡನಗೌಡ ರಂಗಮಂದಿರದಲ್ಲಿ ಜರುಗಿತು.

ಸಮಾರಂಭವನ್ನು ಉದ್ಘಾಟಿಸಿದ ಭಾರತೀಯ ವೈದ್ಯಕೀಯ ಸಂಘದ ಮಾಜಿ ರಾಜ್ಯಾಧ್ಯಕ್ಷ ಡಾ ಮಧುಸೂಧನ ಕಾರಿಗನೂರು, ತೊಗಲುಗೊಂಬೆ ಮನುಷ್ಯ ಜೀವನದ ಒತ್ತಡಗಳನ್ನ ನಿವಾರಿಸುತ್ತದೆ ಎಂದರು.

ದೇಶ ವಿದೇಶದಲ್ಲಿ ತೊಗಲುಗೊಂಬೆ ನಾಟಕ ಪ್ರದರ್ಶನಕ್ಕೆ ತುಂಬಾ ಬೇಡಿಕೆ ಇದೆ ಎಲೆ ಮರ ಕಾಯಿ ಅಂತಿರುವ ಕಲಾವಿದರನ್ನು ಹುಡುಕಿ ಪ್ರಶಸ್ತಿ ನೀಡುತ್ತಿರುವುದು ಸಂತೋಷದ ವಿಷಯ ಎಂದು ಅಧ್ಯಕ್ಷತೆಯನ್ನು ವಹಿಸಿದ್ದ ಜೆ. ಟಿ.ಫೌಂಡೇಶನ್ ಅಧ್ಯಕ್ಷ ತಿಮ್ಮಪ್ಪ ಜೋಳದ ರಾಶಿ ಹೇಳಿದರು.


ಪ್ರಶಸ್ತಿಯನ್ನು ಸ್ವೀಕರಿಸಿದ ಎಲ್ಲಾ ಗಣ್ಯರ ಜವಾಬ್ದಾರಿ ಮತ್ತಷ್ಟು ಹೆಚ್ಚಾಗಿದೆ ತೊಗಲುಗೊಂಬೆ ಆಟ ರಾಜರ ಆಶ್ರಯಕ್ಕಿಂತ ಜನರ ಆಶ್ರಯದಲ್ಲಿ ಬೆಳೆಯಿತು. ಬಳ್ಳಾರಿಯಲ್ಲಿ ನುರಿತ ಕಲಾವಿದರನ್ನು ಗುರುತಿಸುವ ಕೆಲಸ ಈ ಸಂಸ್ಥೆ ಮಾಡುತ್ತಿರುವುದು ಶ್ಲಾಘನೀಯ ಎಂದು ಸಂಡೂರಿನ ಪ್ರಭುದೇವರ ಮಠದ ಪ್ರಭು ಮಹಾಸ್ವಾಮಿ ಹೇಳಿದರು.

ಮೇಧಾ ಕಾಲೇಜಿ ಮುಖ್ಯಸ್ಥ ಡಾ. ರಾಮ್ ಕಿರಣ್ , ನೃತ್ಯ ಜಿಲಾನಿ ಭಾಷಾ, ದೊಡ್ಡಬಸಪ್ಪ ಯಾಟಿ ಉಪಸ್ಥಿತರಿದ್ದರು. "ಹುಲಿಕುಂಟೆ ಶ್ರೀ" ಪ್ರಶಸ್ತಿಯನ್ನು ವಿವಿಧ ಕ್ಷೇತ್ರದಲ್ಲಿ ಸಾಧನೆ ಗೈದ 27 ಗಣ್ಯರಿಗೆ ಪ್ರಶಸ್ತಿ ಪ್ರದಾನ ಮಾಡಲಾಯಿತು.

ನಂತರ ಸುಗಮ ಸಂಗೀತ ಮಲ್ಲಿಕಾರ್ಜುನ ತೂರನೂರು, ಸಮೂಹ ನೃತ್ಯವನ್ನು ಎಸ್ ಕೆ ಆರ್ ಜಿಲಾನಿ ಭಾಷಾ ಮತ್ತು ತಂಡ. ಮಲ್ಲಿಕಾರ್ಜುನ ಸ್ವಾಮಿ ಮತ್ತು ತಂಡದವರು ರೇಣುಕಾ ಮಹಾತ್ಮೆ ಎನ್ನುವ ಬಯಲಾಟವನ್ನು ಪ್ರದರ್ಶಿಸಿದರು

ಸಂಸ್ಥೆಯ ಅಧ್ಯಕ್ಷರ ಹೊನ್ನೂರಸ್ವಾಮ ಸ್ವಾಗತ ಮತ್ತು ಪ್ರಾಸ್ತಾವಿಕ ನುಡಿಗಳನ್ನಾಡಿದರು. ಪ್ರಾರ್ಥನೆ ಜಡೆಣಟಿಜಜಜಿಟಿಜಜಶ ಎಮ್ಮಿಗನೂರು ವಂದನಾರ್ಪಣೆ, ಸಂಸ್ಥೆಯ ಕಾರ್ಯದರ್ಶಿ ಲಕ್ಷ್ಮಿದೇವಿ, ಕಾರ್ಯಕ್ರಮದ ನಿರೂಪಣೆ ಬಸವರಾಜ ಅಮಾತಿ ಮತ್ತು ವಿಷ್ಣು ಹಡಪದ ನೆರವೇರಿಸಿಕೊಟ್ಟರು

## ಕೃ.ಪ.ಸ. ಸಂಘ ಕೋಟನೂರ್ ಕಚೇರಿ ಅಭಿವೃದ್ಧಿಗೆ 5 ಲಕ್ಷ ರೂ ಅನುದಾನ




**ಕಲಬುರಗಿ:** ಕೃಷಿ ಪತ್ತಿನ ಸಹಕಾರ ಸಂಘ, ಕೋಟನೂರ್ ಕಚೇರಿ ಅಭಿವೃದ್ಧಿಗಾಗಿ ಸಲ್ಲಿಸಿದ ಮನವಿಗೆ ಸ್ಪಂದಿಸಿದ ಕಲಬುರ್ಗಿ ದಕ್ಷಿಣ ಮತಕ್ಷೇತ್ರದ ಜನಪ್ರಿಯ ಶಾಸಕ ಅಲ್ಲಮಪ್ರಭು ಪಾಟೀಲ್ ಅವರು 5 ಲಕ್ಷ ರೂ ಅನುದಾನ ಬಿಡುಗಡೆಗೊಳಿಸುವುದಾಗಿ ಭರವಸೆ ನೀಡಿದ್ದಾರೆ.

ಸಂಘದ ಅಧ್ಯಕ್ಷ ಮಲ್ಲಿನಾಥ ಎಸ್. ನಾಗನಹಳ್ಳಿ ಅವರು ಅಧಿಕಾರ ಸ್ವೀಕರಿಸಿದ ದಿನದಿಂದಲೇ ರೈತರ ಪರವಾಗಿ ನಿರಂತರ ಹೋರಾಟ ನಡೆಸುತ್ತಿದ್ದು, ವಿವಿಧ ಸಭೆ–ಸಮಾರಂಭಗಳಲ್ಲಿ ಭಾಗವಹಿಸಿ ರೈತರಿಗೆ ಧೈರ್ಯ ತುಂಬುತ್ತಿದ್ದಾರೆ.

1986ರಿಂದ ಕಾರ್ಯನಿರ್ವಹಿಸುತ್ತಿರುವ ಈ ಸಹಕಾರ ಸಂಘವು ಸುಮಾರು 40 ಗ್ರಾಮಗಳನ್ನು ಒಳಗೊಂಡಿದ್ದು, ಕೃಷಿ ಮತ್ತು ರೈತರ ಅಭಿವೃದ್ಧಿಗಾಗಿ ನಿರಂತರ ಸೇವೆ ಸಲ್ಲಿಸುತ್ತಿದೆ. ಸಂಘದ ವ್ಯಾಪ್ತಿಯಲ್ಲಿ ಕೋಟನೂರ್, ನಾಗನಹಳ್ಳಿ, ರಾಜಾಪುರ, ನಂದಿಕೂರ್, ಸೀತಾನೋರ್, ಕೆಸರಟಗಿ ಸೇರಿದಂತೆ ಹಲವಾರು ಗ್ರಾಮಗಳ ರೈತರು ಸದಸ್ಯರಾಗಿದ್ದಾರೆ.

ಕೋಟನೂರ್ ಗ್ರಾಮದಲ್ಲಿರುವ ಸಂಘದ ಕಚೇರಿ ದುರಸ್ತಿಗಾಗಿ ಶಾಸಕರಿಗೆ ಮನವಿ ಮಾಡಲಾಗಿದ್ದು, ರೈತರಿಗೆ ಉತ್ತಮ ಸೌಲಭ್ಯ ಕಲ್ಪಿಸುವ ಉದ್ದೇಶದಿಂದ ತಕ್ಷಣವೇ 5 ಲಕ್ಷ ಅನುದಾನ ಬಿಡುಗಡೆಗೊಳಿಸುವುದಾಗಿ ಶಾಸಕರು ತಿಳಿಸಿದ್ದಾರೆ. ಈ ಸಹಾಯಕ್ಕಾಗಿ ಸಂಘದ ಅಧ್ಯಕ್ಷ ಮಲ್ಲಿನಾಥ ನಾಗನಹಳ್ಳಿ ಅವರು ರೈತರ ಪರವಾಗಿ ಶಾಸಕರಿಗೆ ಹೃತ್ಪೂರ್ವಕ ಧನ್ಯವಾದಗಳನ್ನು ತಿಳಿಸಿದ್ದಾರೆ.

## ಭೈರಾಮಡಗಿ ಕಾಲಭೈರವ ದೇವಸ್ಥಾನಕ್ಕೆ ಯಾತ್ರಿಕ ನಿವಾಸ: ಅರುಣಕುಮಾರ



**ಕಲಬುರಗಿ,ಮಾ.30:** ಐತಿಹಾಸಿಕ ಭೈರಾಮಡಗಿ ಗ್ರಾಮದ ಶ್ರೀ ಕಾಲ ಭೈರವ ದೇವಸ್ಥಾನಕ್ಕೆ ಯಾತ್ರಿಕ ನಿವಾಸ ಹಾಗೂ ಗ್ರಾಮದಿಂದ ದೇವಾಲಯುವರೆಗೆ ರಸ್ತೆ ಅಭಿವೃದ್ಧಿಪಡಿಸುವುದಾಗಿ ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮದ ಅಧ್ಯಕ್ಷ ಅರುಣಕುಮಾರ ಎಂ ಪಾಟೀಲ್ ಭರವಸೆ ನೀಡಿದರು.

ಅಫಜಲಪುರ ತಾಲೂಕಿನ ಭೈರಾಮಡಗಿ ಗ್ರಾಮದ ಕಾಲಭೈರವ ದೇವಸ್ಥಾನದ ರಥೋತ್ಸವ ಅಂಗವಾಗಿ ನಡೆದ ಧಾರ್ಮಿಕ ಸಭೆಯಲ್ಲಿ ಪಾಲ್ಗೊಂಡು ಮಾತನಾಡಿದರು. ಕಾಲ ಭೈರವ ಈ ದೇವಸ್ಥಾನಕ್ಕೆ ಈಗ ಭಕ್ತರ ಸಂಖ್ಯೆ ಹೆಚ್ಚಳವಾಗುತ್ತಿದೆ. ಹೀಗಾಗಿ ಯಾತ್ರಿಕ ನಿವಾಸ ಹಾಗೂ ದೇವಸ್ಥಾನದ ರಸ್ತೆ ನಿರ್ಮಾಣ ಕಾರ್ಯವನ್ನು ಆದ್ಯತೆ ಮೇರೆಗೆ ಕಾರ್ಯರೂಪಕ್ಕೆ ತರಲಾಗುವುದು ಎಂದು ಪ್ರಕಟಿಸಿದರು.

ಈ ಹಿಂದೆ ಪ್ರವಾಸೋದ್ಯಮ ಇಲಾಖೆಯಡಿ 30 ಲಕ್ಷ ರೂ ವೆಚ್ಚದಲ್ಲಿ ಯಾತ್ರಿಕ ನಿವಾಸ ಭೈರಲಿಂಗೇಶ್ವರ ದೇವಸ್ಥಾನಕ್ಕೆ ಮಂಜೂರಾಗಿತ್ತು. ಜತೆಗೆ ಸ್ಥಳಾವಕಾಶ ಬಗ್ಗೆ ಸಮೀಕ್ಷೆ ಸಹ ಮಾಡಲಾಗಿತ್ತು. ಆದರೆ ಅನುದಾನ ಕೊರತೆಯೋ ಇಲ್ಲವೇ ಇನ್ನಾವುದು ತಾಂತ್ರಿಕ ಕಾರಣದಿಂದ ನಿಂತಿದೆ ಎಂಬುದನ್ನು ಪರಿಶೀಲಿಸಲಾಗುವುದು.ಭೈರಾಮಡಗಿ ಗ್ರಾಮಕ್ಕೆ ಅಗತ್ಯ ಮೂಲ ಸೌಕರ್ಯಗಳು ಹಾಗೂ ಇತರ ಕಾರ್ಯಗಳನ್ನು ಕೈಗೊಳ್ಳುವ ಮೂಲಕ ಅಭಿವೃದ್ಧಿ ಬದ್ಧತೆ ಹೊಂದಲಾಗಿದೆ ಎಂದು ಅರುಣಕುಮಾರ ಪಾಟೀಲ್ ಹೇಳಿದರು. ಕಾಲ ಭೈರವ ದೇವಸ್ಥಾನ ಭಕ್ತ ಮಂಡಳಿ ಪರವಾಗಿ ಸನ್ಮಾನಿಸಿ ಮನವಿ ಪತ್ರ ಸಲ್ಲಿಸಲಾಯಿತು.

ಭೈರಾಮಡಗಿ ಮಹಾಂತೇಶ್ವರ ವಿರಕ್ತ ಮಠದ ಷಡಕ್ಷರಿ ದೇವರು, ಸ್ಟೇಷನ್ ಗಾಣಗಾಪುರದ ನಾಗು ಮುತ್ಯಾ ಸಾನ್ನಿಧ್ಯ ವಹಿಸಿದ್ದರು.ಇದೇ ಸಂದರ್ಭದಲ್ಲಿ ವಿವಿಧ ಸರ್ಕಾರಿ ಹುದ್ದೆಗಳಲ್ಲಿರುವ ಗ್ರಾಮದ ನೌಕರರನ್ನು ಸನ್ಮಾನಿಸಲಾಯಿತು. ರಾಜ್ಯ ಸರ್ಕಾರಿ ನೌಕರರ ಗೃಹ ನಿರ್ಮಾಣ ಸಹಕಾರ ಸಂಘದ ನಿರ್ದೇಶಕರಾಗಿ ಚುನಾಯಿತರಾದ ಲಕ್ಷ್ಮೀಕಾಂತ ಡಿ. ಪಾಟೀಲ್ ಅವರನ್ನು ವಿಶೇಷವಾಗಿ ಸನ್ಮಾನಿಸಲಾಯಿತು.

ಪತ್ರಕರ್ತ ಹಣಮಂತರಾವ ಡಿ. ಹಿರೇಗೌಡ, ಪ್ರಮುಖರಾದ ಶಿವಾನಂದ ಯಶ್ವಂತರಾವ ಬಿರಾದಾರ, ಈರಣ್ಣ ನಂದರಗಿ, ಬಸಣ್ಣ ಜಿ. ಹಿರೇಗೌಡ, ಸಂಜುಗೌಡ ಬಿದಾದಾರ, ಜೆ.ಡಿ. ಪಾಟೀಲ್, ಮಲ್ಲಿನಾಥ ಜವಳಿ, ವಿಶ್ವನಾಥ ಪಾಟೀಲ್, ಸಿದ್ದಲಿಂಗ ಗುರನಂಜಿ, ಶಿವುಗೌಡ ಬಿ. ಪೊಲೀಸ್ ಪಾಟೀಲ್ ಸೇರಿದಂತೆ ಮುಂತಾದವರು ಈ ಸಂದರ್ಭದಲ್ಲಿ ಹಾಜರಿದ್ದರು. ನಿವೃತ್ತ ಶಿಕ್ಷಕ ಶಾಮರಾವ ಪೊ?ದ್ದಾರ ನಿರೂಪಿಸಿ ವಂದಿಸಿದರು. ಇದಕ್ಕೂ ಮುಂಚೆ ನಡೆದ ಕಾಲ ಭೈರವ ರಥೋತ್ಸವದಲ್ಲಿ ಸಹಸ್ರಾರು ಭಕ್ತರು ಪಾಲ್ಗೊಂಡಿದ್ದರು.

## ಒಳ ಮೀಸಲಾತಿ ಜಾರಿಗೆ ಶಿವುಕುಮಾರ ಅಜಾದಪೂರ ಒತ್ತಾಯ



**ಕಲಬುರಗಿ:ಮಾ.30:** ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದು ಎರಡುವರೆ ವರ್ಷವಾದರೂ ನೆಪ ಮಾತ್ರಕ್ಕೆ ಆಯೋಗ ನೇಮಿಸಿ, ಮಾದಿಗ ಸಮಾಜಕ್ಕೆ ದ್ರೋಹವೆಸಗಿದೆ ಎಂದು ದಲಿತ ಸಂಘರ್ಷ ಸಮಿತಿಯ ಜಿಲ್ಲಾ ಸಂಘಟನಾ ಸಂಚಾಲಕ ಶಿವುಕುಮಾರ ಅಜಾದಪೂರ ಆರೋಪಿಸಿದ್ದಾರೆ.

'ಒಳ ಮೀಸಲಾತಿ ಜಾರಿ ಮಾಡುವುದಾಗಿ ಕಾಂಗ್ರೆಸ್ ಪಕ್ಷ ಚುನಾವಣಾ ಪ್ರಣಾಳಿಕೆಯಲ್ಲಿ ಘೋಷಿಸಿತ್ತು. ಈ ವಿಚಾರದಲ್ಲಿ ಸರ್ಕಾರ ಮಲತಾಯಿ ಧೋರಣೆ ಅನುಸರಿಸುತ್ತಿದೆ' ಎಂದು ಅವರು ದೂರಿದರು.

ನ್ಯಾಯಮೂರ್ತಿ ಎ.ಜೆ. ಸದಾಶಿವ ಆಯೋಗ ಮನೆಮನೆ ಸಮೀಕ್ಷೆ ನಡೆಸಿ, ಆಯಾ ಜಾತಿಗಳ ಜನಸಂಖ್ಯೆ, ಹಿಂದುಳಿದಿರುವಿಕೆ, ಒಳ ಮೀಸಲಾತಿ ವರ್ಗೀಕರಣ ವರದಿಯನ್ನು ಸಿದ್ಧಪಡಿಸಿದೆ. ಪರಿಶಿಷ್ಟ ಜಾತಿಯ ಉಪಜಾತಿಗಳಿಗೆ ಒಳ ಮೀಸಲಾತಿ ಹಂಚಿಕೆ ಮಾಡುವಂತೆ ರಾಜ್ಯ ಸರ್ಕಾರಕ್ಕೆ ಸುಪ್ರೀಂ ಕೋರ್ಟ್ 2024ರ ಆಗಸ್ಟ್ 1ರಂದು ಆದೇಶಿಸಿದೆ. ಸರ್ಕಾರ ನವೆಂಬರ್ 12ರಂದು ನಿವೃತ್ತ ನ್ಯಾಯಮೂರ್ತಿ ಎಚ್.ಎನ್.ನಾಗಮೋಹನದಾಸ್ ನೇತೃತ್ವದಲ್ಲಿ ಏಕ ಸದಸ್ಯ ಆಯೋಗ ರಚಿಸಿದೆ' ಎಂದರು. ಮೀಸಲಾತಿ ಕೊಟ್ಟ ರಾಜ್ಯ ಸರಕಾರದ ದಂದ್ವವನ್ನು ಸುಪ್ರೀಂ ಮೀಸಲಾತಿ ಹೆಚ್ಚಳ ಬಗ್ಗೆ ಪ್ರಶ್ನೆ ಮಾಡಿದೆ. ಇದರಿಂದ ಒಳ ಮೀಸಲಾತಿಗೆ ದೊಡ್ಡ ಕೊಡಲಿ ಏಟು ಬಿದ್ದಿದೆ.

ಸಿ.ಎಂ ಸಿದ್ದರಾಮಯ್ಯನವರು ಬಸವಣ್ಣನವರ ತತ್ವ ಆದರ್ಶದಡಿಯಲ್ಲಿ ರಾಜ್ಯದಲ್ಲಿ ಎರಡನೇ ಬಾರಿಗೆ ಸಿ.ಎಂ ಆಗಿದ್ದಾರೆ.ತುಳಿತಕ್ಕೊಳಗಾದ ಮಾದಿಗರ ಅನ್ಯಾಯ ಆಗುತ್ತಿದೆ. ಎಸ್.ಸಿ ಗಳಿಗೆ ಈಗಿರುವ ಶೇ.15 ರಲ್ಲಿ ಮಾದಿಗರಿಗೆ ಶೇ.6 ರಷ್ಟು ಜನಸಂಖ್ಯೆಗೆ ಅನುಗುಣವಾಗಿ ಶಿಕ್ಷಣ ಮತ್ತು ಉದ್ಯೋಗದಲ್ಲಿ ಒಳಮೀಸಲಾತಿ ಜಾರಿಗೊಳಿಸಿ 58 ಸಾವಿರ ಸರಕಾರಿ ಉದ್ಯೋಗ ಭರ್ತಿ ಆಗಬೇಕೆಂದು ಅವರು ಆಗ್ರಹಿಸಿದ್ದಾರೆ.ರಾಜ್ಯದಲ್ಲಿ ನೀವು ಎರಡು ಬಾರಿ ಅಧಿಕಾರಕ್ಕೆ ಬರಲು ರಾಜ್ಯದ ಬಹುಸಂಖ್ಯಾತ ಮಾದಿಗರು ಸಂಪೂರ್ಣ ಶಕ್ತಿ ನೀಡಿದ್ದಾರೆ. ಈ ಜನರಿಗೆ ಒಳ ಮೀಸಲಾತಿ ಜಾರಿ ಮಾಡದೇ ಹೋದಲ್ಲಿ ಬರುವ ಚುನಾವಣೆಯಲ್ಲಿ ತಕ್ಕ ಪಾಠ ಕಲಿಸಬೇಕಾಗುತ್ತದೆ ಎಂದು ಎಚ್ಚರಿಕೆ ನೀಡಿದರು.

## 10ದಿನದೊಳಗಾಗಿ ಬಿಲ್ ಪಾವತಿಸದಿದ್ದಲ್ಲಿ ರಸ್ತೆಗಿಳಿದು ಪ್ರತಿಭಟನೆ, ಎಚ್ಚರಿಕೆ

**ಕಮಲನಗರ: ಮಾ.30:**ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆ ತಾಲ್ಲೂಕು ಘಟಕ ಪದಾಧಿಕಾರಿಗಳ ನೇತೃತ್ವದಲ್ಲಿ ಕಬ್ಬು ಬಿಲ್ಲು ಪಾವತಿಸಬೇಕೆಂದು ಒತ್ತಾಯಿಸಿ ತಹಶೀಲ್ದಾರ್ ಅಮಿತಕುಮಾರ ಕುಲಕರ್ಣಿ ಅವರಿಗೆ ಮನವಿ ಪತ್ರ ಸಲ್ಲಿಸಲಾಯಿತು.ರೈತ ಸಂಘ ತಾಲೂಕು ಘಟಕ ಅಧ್ಯಕ್ಷ ಪ್ರವೀಣ ಕುಲಕರ್ಣಿ ಮಾತನಾಡಿ, ರೈತ ಬಾಂಧವರೂ ತಮ್ಮ ಕಬ್ಬು ಸಾಗಟ ಮಾಡಿ 2 ತಿಂಗಳಾದ್ರೂ ಕಬ್ಬು ಸಾಗಣೆ ಬಿಲ್ಲು ಪಾವತಿಯಾಗಿಲ್ಲದಿರುವುದು ದುಃಖ:ಕರದ ಸಂಗತಿಯಾಗಿದೆ ಎಂದು ಬೇಸರ ವ್ಯಕ್ತಪಡಿಸಿದರು.ಸರ್ಕಾರ ನಿಯಮ ಪ್ರಕಾರ ಕಬ್ಬು ಪೂರೈಕೆ ಮಾಡಿದ 15 ದಿನಗಳ ಒಳಗಾಗಿ ಬಿಲ್ ಪಾವತಿ ಮಾಡುವ ನಿಯಮವಿದೆ. ಆದರೆ, ಸರ್ಕಾರ ನಿಯಮ ಪಾಲನೆ ಮಾಡದಿರುವುದರಿಂದಾಗಿ ಆಕ್ರೋಶಕ್ಕೆ ಕಾರಣವಾಗಿದೆ ಎಂದರು.

ಮುಂದಿನ 10 ದಿನಗಳ ಒಳಗಾಗಿ ಕಬ್ಬಿನ ಬಿಲ್ ಪಾವತಿ ಮಾಡದೇ ಇದ್ದಲ್ಲಿ ರಸ್ತೆಗಿಳಿದು ಪ್ರತಿಭಟನೆ



ನಡೆಸುವುದಾಗಿ ಸಂಘಟನೆ ಪ್ರಮುಖರು ಎಚ್ಚರಿಸಿದ್ದಾರೆ.

ರೈತ ಸಂಘ ಗೌರವಧ್ಯಕ್ಷ ವೈಜನಾಥ ವಡ್ಡೆ, ರೈತ ಸಂಘ ತಾಲ್ಲೂಕು ಘಟಕ ಅಧ್ಯಕ್ಷ ಪ್ರವೀಣ ಕುಲಕರ್ಣಿ, ಕಾರ್ಯದರ್ಶಿ ವಿಠ್ಠಲರಾವ ಪಾಟೀಲ, ನಗರ ಅಧ್ಯಕ್ಷ ರತಿಕಾಂತ ಶಿವಣಕರ, ಉಪಾಧ್ಯಕ್ಷ ಮನೋಜ ಪೊಲೀಸ್ ಪಾಟೀಲ, ಕಾರ್ಯದರ್ಶಿ ಧನರಾಜ ವರಾ, ವಿಜಯಕುಮಾರ ಪ್ರಭುರಾವ, ರಾಜಕುಮಾರ ವಡಗಾಂವೆ, ನೀಲಾಂಬಿಕಾದೇವಿ ಗಳಗೆ, ಉಮಾಕಾಂತ ಬಚ್ಚಣ್ಣಾ ಸೇರಿದಂತೆ ಹಲವರಿದ್ದರು.

ಸುದ್ದಿ ಮತ್ತು ಜಾಹೀರಾತಿಗಾಗಿ ಸಂಪರ್ಕಿಸಿ
6360866626

Owned, and published by SYED AHAMAD HUSSAINI MATWALE from Ward No,21 S S Matwale Hussaini Saheb Dargha, Jummal Doddi, Po-Manvi,Raichur, Karnataka -584123.
Printed at Hulkoti, New Court, Opposite Plot No, 28, RS No 312/3B, Garag Complex, Gadag, Karnataka-582101 Editor: SYED AHAMAD HUSSAINI MATWALE